# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ – 2015



# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 32

ಸಂಚಿಕೆ – 5

ಫೆಬ್ರವರಿ – 2015



**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಆರ್.ಕೆ. ಲಕ್ಷ್ಮಣ್ | **ಶಿವಕುಮಾರ್** | 3 |
| ಚೊಟ್ಟೆಯಂಡ ಹೋಮ್.. | **ವತ್ಸಲ** | 5 |
| ಕತ್ತೆ ಮತ್ತು ಎಮ್ಮೆ.... | **ಸಿ.ಆರ್. ಸತ್ಯ** | 12 |
| ಸುಬ್ರಾಮುಗೆ ಸಿಂಪಥಿ... | **ಎಚ್. ಗೋಪಾಲಕೃಷ್ಣ** | 15 |
| ಕೊನೆಯ ಮಾತು | **ಸು. ವಿಜಯಲಕ್ಷ್ಮಿ** | 18 |
| ಗೊರೂರರ ತಿಳಿಹಾಸ್ಯದ... | **ಸುಕೇಶವ** | 22 |
| ಕಡ್ಲೆಕಾಯಿ ಕಥೆ | **ಬೇಲೂರು ರಾಮಮೂರ್ತಿ** | 24 |
| ತುಂತುರು | **ದಂನಾಳ** | 25 |
| ಮೂರು ತಲೆಮಾರಿನ... | **ಡಾ. ರುದ್ರಯ್ಯ ವಿ.** | 26 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 29 |
| ಜಸ್ಟ್ ಮಿಸ್ಸೋ..... | **ಗುಂಡುರಾವ್ ದೇಸಾಯಿ** | 30 |
| ಏಕಾದಶಿ ವ್ರತ ಭಂಗ... | **ಶರತ್ ಕಲ್ಕೋಡ್** | 34 |
| ಅಣಕು ಗೀತೆ | **ಶ್ರೀವತ್ಸ ಜೋಶಿ** | 37 |
| ಇಲ್ಲಿ ಪಿಂಡಗಳು... | **ಪ್ರಶಾಂತ ಅಡೂರ** | 39 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● **ಪ್ರಕಾಶ್**



ಏಪ್ರಿಲ್‌ನಿಂದ ವಿದ್ಯುತ್ ತುಟ್ಟಿ – ಪತ್ರಿಕೆ

***• 'Shocking' ಸುದ್ದಿ !!***

★★★

ಪೋಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ಮರು ಪರೀಕ್ಷೆ – ಸುದ್ದಿ

***• ಬೇಲಿಯೇ ಎದ್ದು....... !!***

★★★

ಮತ್ತೊಂದು ಸುಗ್ರೀವಾಜ್ಞೆ – ಪತ್ರಿಕೆ

***• ರಾಮ, ರಾಮ !!***

★★★

ಬೋರ್‌ವೆಲ್ ಮಾಲೀಕರಿಂದ ಶುಲ್ಕ ವಸೂಲಿ ಮಾಡುತ್ತಿದ್ದ ನಕಲಿ ಅಧಿಕಾರಿ ಬಂಧನ – ಸುದ್ದಿ

***• ಕಡಿಮೆ ಕೇಳಿದನೇನೋ ಪಾಪ !!***

★★★

ಮಾರ್ಕೊ ಪೋಲೋ ಬಸ್‌ಗಳಿಂದ ಭಾರೀ ನಷ್ಟ – ಸುದ್ದಿ

***• 'ಪೋಲು' ಅಂತ ಹೆಸರೇ ಇದೆಯಲ್ಲ !!***

★★★

2ಜಿ ಹಗರಣ; ಕನಿಮೊಳಿ ಭಾಗಿ – ಪತ್ರಿಕೆ

***• ಅವರ ಹೆಸರನ್ನು ಕನ್ನಡದಲ್ಲಿ ಬರೆಯೋದು ಹೇಗೆ ಅಂತ ಅಪರಂಜಿ ನಕ್ಕಳಂತೆ !!***

★★★

ಅದಾನಿ ಸಮೂಹಕ್ಕೆ ಸಾಲ; ಕಾಂಗ್ರೆಸ್ ಆಕ್ಷೇಪ – ಸುದ್ದಿ

***• ಹೌದು, ಅದು ದುರ್ದಾನ !!***

★★★

ಇಕ್ಕಟ್ಟಿನಲ್ಲಿ 'ದೇವಮಾನವ' – ಚಂದೀಘಡ ಸುದ್ದಿ

***• ದೇವ ದೇವ !!***

★★★




# ಆರ್.ಕೆ. ಲಕ್ಷ್ಮಣ್

**ಖ್ಯಾ**ತ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್ ಇನ್ನಿಲ್ಲ. ಕೊರವಂಜಿಯಲ್ಲಿ ಬರುತ್ತಿದ್ದ ಲಕ್ಷ್ಮಣ್‌ರ ವ್ಯಂಗ್ಯಚಿತ್ರಗಳ ಡಯಟ್ಟಿನಲ್ಲಿ ಬೆಳೆದು ಜಗತ್ತಿಗೆ ಕಣ್ಣುತೆರೆದ ಎಲ್ಲ ಕೊರವಂಜಿ ಅಪರಂಜಿ ಅಭಿಮಾನಿಗಳಿಗೆ ಲಕ್ಷ್ಮಣ್‌ರ ನಿರ್ಗಮನ ಎಷ್ಟೇ ನಿರೀಕ್ಷಿತವಾದರೂ ಸುಲಭವಾಗಿ ಒಪ್ಪಿಕೊಳ್ಳಲಾಗದ ಸಂಗತಿ. ರಾ.ಶಿ.ಯವರು ಕಸ್ತೂರಿಯವರೊಂದಿಗೆ ಜೊತೆಗೂಡಿ 1942ರಲ್ಲಿ ಕೊರವಂಜಿಯನ್ನು ಹೊರತಂದಾಗ ಯುವಕ ಲಕ್ಷ್ಮಣ್‌ರ ಹೆಸರು ಮುಖಪುಟದಲ್ಲೇ ರಾರಾಜಿಸುತ್ತಿತ್ತು. ಕೈಯಲ್ಲಿ ಬೊಂಬೆಯೊಂದನ್ನು ಇಟ್ಟುಕೊಂಡು ಕಣಿ ಹೇಳಲು ಸಿದ್ಧವಾಗಿದ್ದ ಕೊರವಂಜಿಯ ಚಿತ್ರವನ್ನು ರಚಿಸಿದ್ದು ಲಕ್ಷ್ಮಣ್. ಇದರೊಂದಿಗೆ ಮೊದಲ ಹಲವು ವರ್ಷಗಳಲ್ಲಿ ಪ್ರತಿ ಸಂಚಿಕೆಯಲ್ಲೂ ಲಕ್ಷ್ಮಣ್‌ರವರ ವ್ಯಂಗ್ಯಚಿತ್ರಗಳು ಕೊರವಂಜಿ ಓದುಗರನ್ನು ರಂಜಿಸುತ್ತಿದ್ದವು. ಆ ದಿನಗಳಲ್ಲಿ ಲಕ್ಷ್ಮಣ್ ಕಸ್ತೂರಿಯವರ ವಿದ್ಯಾರ್ಥಿ. ಚಿಕ್ಕ ವಯಸ್ಸಿನಿಂದಲೇ ಲಕ್ಷ್ಮಣ್‌ಗೆ ವ್ಯಂಗ್ಯಚಿತ್ರ ರಚನಾ ಕಲೆ ಒಲಿದು ಬಂದಿತ್ತು. ಇಂತಹ ಪ್ರತಿಭಾವಂತ ಕೊರವಂಜಿಯ ಪ್ರಾರಂಭದ ವರ್ಷಗಳಲ್ಲಿ ಆ ಸಂಚಿಕೆಯೊಂದಿಗೆ ಕೈಜೋಡಿಸಿ ಅತ್ಯಮೂಲ್ಯ ವ್ಯಂಗ್ಯಚಿತ್ರಗಳನ್ನು ರಚಿಸಿದ್ದು ನಿಜಕ್ಕೂ ಒಳ್ಳೆಯ ಸಂಗತಿ. ಮೊದಲ ಸಂಚಿಕೆ ಹೊರಬಂದನಂತರ, ರಾ.ಶಿ.ಯವರು ಲಕ್ಷ್ಮಣ್‌ಗೆ ಮೆಚ್ಚುಗೆಯ ಪತ್ರವೊಂದನ್ನು ಬರೆದರು. ಅದಕ್ಕೆ ಲಕ್ಷ್ಮಣ್ ಬರೆದ ಉತ್ತರ ಇನ್ನೂ ನನ್ನ ಸಂಗ್ರಹದಲ್ಲಿದೆ. ಇಂಗ್ಲೀಷಿನಲ್ಲಿರುವ ಈ ಪತ್ರದ ಕನ್ನಡ ಭಾಷಾಂತರವನ್ನು ಇಲ್ಲಿ ನೋಡಿ.

ಪ್ರಿಯ ಡಾ|| ಶಿವರಾಮನ್,

ನಿಮ್ಮ ಸೌಜನ್ಯಯುತ ಪತ್ರ ತಲುಪಿದೆ. ನಾನು ಊರಿನಲ್ಲಿ ಇಲ್ಲದ್ದರಿಂದ ಈ ಮುಂಚೆಯೇ ನಿಮ್ಮ ಪತ್ರಕ್ಕೆ ಉತ್ತರ ನೀಡಲು ಸಾಧ್ಯವಾಗದಿದ್ದದಕ್ಕೆ ಕ್ಷಮೆ ಬೇಡುತ್ತೇನೆ. ನಾಲ್ಕೈದು ವರ್ಷಗಳ ಹಿಂದೆ ನಮ್ಮ ಅಣ್ಣನೊಡನೆ ಒಮ್ಮೆ ನಾನು ನಿಮ್ಮ ಮನೆಗೆ ಬಂದಿದ್ದೆ. ಹಾಗಾಗಿ ನಿಮ್ಮ ಪತ್ರ ಬಂದಾಗ ಸಂಪೂರ್ಣ ಅಪರಿಚಿತರಿಂದ ಬಂದ ಪತ್ರ ಎಂದೇನೂ ಅನಿಸಲಿಲ್ಲ.

ನನ್ನ ಚಿತ್ರಗಳ ಬಗ್ಗೆ ಮೆಚ್ಚುಗೆ ಸೂಚಿಸಿದ್ದಕ್ಕಾಗಿ ನಿಮಗೆ ನನ್ನ ಧನ್ಯವಾದಗಳು. ಹೌದು, ಲೋ ಮತ್ತು ಜಿ.ಎಚ್.ಡಿ. ಅವರುಗಳ ಮಟ್ಟಕ್ಕೆ ನಾನು ಏರಬೇಕೆಂಬ ಮಹದಾಶೆ ನನ್ನಲ್ಲಿದೆ. ಆದರೆ ಈ ಕನಸು

ನನಸಾಗಬೇಕಾದರೆ ನೀವು ಮತ್ತು ನಿಮ್ಮಂತಹವರ ಪ್ರೋತ್ಸಾಹ ನಮಗೆ ಅಗತ್ಯ.

ಪತ್ರಿಕೆಯನ್ನು ಉತ್ತಮಪಡಿಸಲು ನನ್ನ ಸಲಹೆ ಕೇಳಿದ್ದೀರ. ಶ್ರೀ ಕಸ್ತೂರಿಯವರ ಮೂಲಕ ನನ್ನ ಸಲಹೆಗಳನ್ನು ತಿಳಿಸುವೆ.

ನಿಮ್ಮ ಪ್ರೀತಿಯ

**ಆರ್.ಕೆ. ಎಲ್**

ಲಕ್ಷ್ಮಣ್ ಮುಂಬಯಿಗೆ ಹೋಗಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾಗಿ ಸೇರಿದ ನಂತರ ಅವರ ಖ್ಯಾತಿ ಕೇವಲ ನಾಡಿನಲ್ಲಷ್ಟೇ ಅಲ್ಲ, ಅಂತರ ರಾಷ್ಟ್ರೀಯ ಮಟ್ಟದಲ್ಲೂ ಹರಡಿತು. ಅವರು ಸೃಷ್ಟಿಸಿದ ''ದ ಕಾಮನ್ ಮ್ಯಾನ್'', ದಿನನಿತ್ಯದ ಆಗುಹೋಗುಗಳಿಗೆ ಜನಸಾಮಾನ್ಯನು ಸ್ಪಂದಿಸುತ್ತಿದ್ದ ರೀತಿಯನ್ನು ಬಹು ಮಾರ್ಮಿಕವಾಗಿ ತಿಳಿಸುತ್ತಿತ್ತು.

ಫ್ರಾನ್ಸಿನ ವ್ಯಂಗ್ಯಚಿತ್ರಕಾರ ಚಾರ್ಲಿ ಹೆಬ್ಡೋನ ಭೀಕರ ಕೊಲೆಯ ಬಗ್ಗೆ ಅಂತರ ರಾಷ್ಟ್ರೀಯ ಚರ್ಚೆ ನಡೆಯುತ್ತಿರುವಾಗಲೇ ಲಕ್ಷ್ಮಣ್ ತಮ್ಮ ಕೊನೆಯುಸಿರೆಳೆದಿರುವುದೂ ಕಾಕತಾಳೀಯವೇನಲ್ಲ ಎನಿಸುತ್ತದೆ. ಈಗ ನಡೆಯುತ್ತಿರುವ ಚರ್ಚೆಯ ಒಂದು ತುದಿಯಲ್ಲಿರುವವರು ಅಭಿವ್ಯಕ್ತಿ ಸ್ವಾತಂತ್ರ್ಯವೇ ಪರಮ ಧ್ಯೇಯ ಎನ್ನುತ್ತಿದ್ದರೆ ಇನ್ನೊಂದು ತುದಿಯಲ್ಲಿನ ಜನ, ಅಭಿವ್ಯಕ್ತಿ ಸ್ವಾತಂತ್ರ್ಯವು ಸಾಮಾಜಿಕ ಹೊಣೆಗಾರಿಕೆಯ ಮಿತಿಯಲ್ಲಿ ಪ್ರಕಟವಾಗಬೇಕು ಎನ್ನುತ್ತಿದ್ದಾರೆ. ಲಕ್ಷ್ಮಣ್‌ರಿಗೆ ಇದು ಒಂದು ಚರ್ಚಿಸುವ ಪ್ರಶ್ನೆಯೇ ಆಗಿರಲಿಲ್ಲ. ಸಮಾಜದ ಆರೋಗ್ಯವನ್ನು ಕಾಪಾಡಲು ವ್ಯಂಗ್ಯಚಿತ್ರ ಮಾಧ್ಯಮ ಒಂದು ಉತ್ತಮ ಔಷಧಿ ಎಂಬ ಮಾತನ್ನು ಅವರು ಖಚಿತವಾಗಿ ನಂಬಿದ್ದರೂ ವ್ಯಂಗ್ಯಚಿತ್ರಗಳು ಸಮಾಜಕ್ಕೆ ನೀಡುವ ಆ ಔಷಧಿಯನ್ನು ಹಿತಮಿತವಾಗಿ, ಅತ್ಯಂತ ಜವಾಬ್ದಾರಿಯಿಂದ ಆರೋಗ್ಯ ಹದಗೆಡದಿರುವಂತೆ ಕೊಡಬೇಕು ಎಂಬುದು ಅವರ ನಿಲುವಾಗಿತ್ತು. ಕೊರವಂಜಿ ಅಪರಂಜಿ ಬಳಗದ ಎಲ್ಲ ಹಾಸ್ಯಾಭಿಮಾನಿಗಳೊಂದಿಗೆ ಅಪರಂಜಿಯೂ ಸಹಾ ಅಗಲಿದ ಲಕ್ಷ್ಮಣ್‌ರಿಗೆ ಕಂಬನಿದುಂಬಿದ ವಿದಾಯವನ್ನು ಹೇಳುತ್ತಾಳೆ.



" ನೋಡಿ ಸ್ವಾಮಿ, ನನ್ಮಗ ನಾಲ್ಕು ವರ್ಷ. ಆಗ್ಲೆ ಇಪ್ಪತ್ತರ ವರ್ಗ ಒಂದು ಎರಡು ಹೇಳ್ತಾನೆ "
" ಪರವಾಗಿಲ್ಲ. ಇಪ್ಪತ್ತು ವರ್ಷಕ್ಕೆ ನೂರರ ವರ್ಗ ಕಲೀತಾನೆ........"

**ಶಿವಕುಮಾರ್**



# ಚೊಟ್ಟೆಯಂಡ ಹೋಮ್ ಸ್ಟೇ ಪ್ರಕರಣ

**- ವತ್ಸನ**

**ಈ** ಅರ್ನಾಬ್ ಗೋಸ್ವಾಮಿ ಕೂಗಾಟದ್ದೇ ಒಂದು ವಿಚಿತ್ರ ಕಣ್ರೀ. ಎಷ್ಟು ಬೇಸರ ಪಟ್ಕೊಂಡು ಅವನನ್ನ ಪುನಃ ನೋಡಬಾರದು ಅಂತ ನಿರ್ಧರಿಸಿದ್ರೂ ಅವನ ಕೂಗಾಟಾನೇ ನೋಡೋಕ್ಕೆ ಮನಸ್ಸು ಎಳೆಯುತ್ತೆ. ಅಂದು ಸಂಜೆ ಸುನಂದಾ ಪುಷ್ಕರ್ (ಆಕೆಯ ಆತ್ಮಕ್ಕೆ ಶಾಂತಿಯಿರಲಿ) ಕೊಲೆಯ ಬಗ್ಗೆ ಅರ್ನಾಬ್ ಕೂಗಾಟ ಮಿತಿ ಮೀರಿದ್ದರಿಂದ ನಾನು ಚಾನಲ್ ಬದಲಿಸಿದೆ. ಆ ಹೊತ್ತಿಗೆ ಸರಿಯಾಗಿ ಶರಲೇಖ ಒಳಗೆ ಬಂದು ತನ್ನ ಆಪ್ತ ಸೋಫಾದ ಮೇಲೆ ಕುಳಿತ. ನಾನು ಟಿ.ವಿ.ಯನ್ನು ಮ್ಯೂಟ್ ಮಾಡಿದೆ.

''ಜಿಮ್ ಕಥ್‌ಬರ್ಟ್ ನೆನಪಿದೆ ತಾನೇ?'' ಶರಲೇಖ ಕೇಳಿದ.

''ನೆನಪಿಲ್ಲದೇ ಏನು? ಅವನು ಮತ್ತು ಅವನ ಗೆಳತಿ ಜೆಸ್ಸಿಕಾ ನಮ್ಮನ್ನ ಅಷ್ಟು ಚೆನ್ನಾಗಿ ನೋಡಿಕೊಂಡರಲ್ಲಾ ಸ್ಕಾಟ್ಲೆಂಡಿನ ಉಲ್ಲಾಪೂಲಿನಲ್ಲಿ. ಮರೆಯಕ್ಕಾಗುತ್ಯೇ ಅವರ ಅದ್ಭುತ ಆತಿಥ್ಯಾನಾ?'' ಅಂದೆ.

''ಅವರಿಬ್ಬರೂ ಬೆಂಗಳೂರಿಗೆ ಬರ್ತಾ ಇದಾರೆ, ಪ್ರವಾಸದ ಮೇಲೆ. ಸಿಗ್ತೀಯಾ ಅಂತ ಇಮೇಲ್ ಕಳಿಸಿದ್ದ. ಖಂಡಿತಾ ಬನ್ನಿ. ಒಂದೆರಡು ದಿನ ಎಲ್ಲಾದರೂ ಪ್ರವಾಸ ಹೋಗೋಣ. ಕರ್ನಾಟಕದ ಪ್ರಕೃತಿ ಸೌಂದರ್ಯ ಸವಿಯುವಿರಂತೆ ಅಂತ ಉತ್ತರಿಸಿದೆ. ಇನ್ನೂ ಎರಡು ವಾರ

---

ಕೊರವಂಜಿ ಅಪರಂಜಿ ಟ್ರಸ್ಟ್, ಬೆಂಗಳೂರು ಮತ್ತು
ಭಾರತೀಯ ವಿದ್ಯಾಭವನ, ಮೈಸೂರು
ಸಹಯೋಗದಲ್ಲಿ

**ಅಪರಂಜಿ ಹಬ್ಬ**

5-04-2015 ಭಾನುವಾರ ಮೈಸೂರಿನಲ್ಲಿ
ಅಪರಂಜಿ ಹಬ್ಬದ ಸ್ಥಳ ಯಾವುದು
ಎಷ್ಟು ಹೊತ್ತಿಂದ ಎಷ್ಟು ಹೊತ್ತಿನವರೆಗೆ
ಯಾರ್ಯಾರು ಬರ್ತಾರೆ, ಏನೇನು ಮಾತಾಡ್ತಾರೆ
ವಿಶೇಷ ಕಾರ್ಯಕ್ರಮಗಳು ಏನೇನು
ಇವುಗಳಿಗೆಲ್ಲ ಸ್ವಲ್ಪ ಕಾಯ್ತೀರ
ಮುಂದಿನ ಸಂಚಿಕೆಯಲ್ಲಿ ಎಲ್ಲ ವಿವರಗಳನ್ನೂ ಕೊಡ್ತೀವಿ
ಮೈಸೂರಿಗೆ ಬನ್ನಿ ಅಪರಂಜಿ ಹಬ್ಬ ಆಚರಿಸೋಣ

ಇದೆ ಅವರು ಬರಕ್ಕೆ. ಯಾವ್ದಾದರೂ ರಿಸಾರ್ಟ್ ಕಾದಿರಿಸಬೇಕಲ್ಲಾ'' ಅಂತ ಹೇಳಿದ ಶರಲೇಖ. ಅವನಿಗೆ ಇಂತಹ ಜುಜುಬಿ ಕೆಲಸಗಳೆಂದರೆ ತೀರ ಅಲರ್ಜಿ. ಅದಕ್ಕೆ ಇಂತಹವನ್ನೆಲ್ಲಾ ನನ್ನ ತಲೆಗೆ ಕಟ್ಟಿ ತಾನು ಹಾಯಾಗಿದ್ಬಿಡತ್ತೆ ಆ ಪ್ರಾಣಿ.

''ಸರಿ. ವ್ಯವಸ್ಥೆ ಮಾಡ್ತೀನಿ. ಹೇಗಿದ್ರೂ ನನ್ನ ಕಾಲೇಜು ಸಹಪಾಠಿ ಚೆಂಗಪ್ಪ ಕೊಡಗಿನಲ್ಲಿರೋ ತನ್ನ ಭವ್ಯವಾದ ಬಂಗಲೇನ ಹೋಮ್ ಸ್ಟೇಗೆ ಬದಲಾಗಿಸಿದಾಗಿನಿಂದ ನನ್ನನ್ನ ಬಾ ಅಂತ ಕರೀತಾನೇ ಇದ್ದಾನೆ. ಅವನ ಚೊಟ್ಟೆಯಂಡ ಹೋಮ್ ಸ್ಟೇ, ಮಡಿಕೇರಿಗೆ ನಲವತ್ತು ಕಿಲೋ ಮೀಟರ್ ದೂರದಲ್ಲಿದೆ ಅಷ್ಟೇ ಇವತ್ತೇ ಫೋನ್ ಮಾಡಿ ವ್ಯವಸ್ಥೆ ಮಾಡ್ತೀನಿ'' ಅಂತ ಹೇಳಿದೆ.

ಇದಾದ ಹದಿನೈದು ದಿನಗಳ ನಂತರ ನಾವೆಲ್ಲರೂ ಇನ್ನೋವಾದಲ್ಲಿ ಕುಳಿತು ಮೈಸೂರಿನ ದಾರಿಯಲ್ಲಿ ಸಾಗಿದ್ದೆವು. ಮೈಸೂರಿನಲ್ಲಿ ಉಪಹಾರ ಮುಗಿಸಿ, ಹುಣಸೂರು ರಸ್ತೆ ಸೇರಿದಾಗ ಬೆಳಗ್ಗೆ ಹತ್ತು ಘಂಟೆ ಆಗಿತ್ತು. ದಾರಿಯುದ್ದಕ್ಕೂ ನಮ್ಮ ನಾಡಿನ ಜನಜೀವನದ ಬಗ್ಗೆ ಶರಲೇಖನ ವೀಕ್ಷಕ ವಿವರಣೆ ನಡೆದೇ ಇತ್ತು. ಅತಿಥಿಗಳೆಂದ ಮೇಲೆ ಎಳನೀರು ಕೊಡಿಸಬೇಡವೇ? ಆ ಸೇವೆಯೂ ಆಯಿತು. ಎಳನೀರಿನ ಒಂದು ಪಕ್ಕವನ್ನ ಕೊಚ್ಚಿ ಗಂಜಿಯನ್ನು ತೆಗೆಯುವ ಚಮಚವನ್ನಾಗಿ ಪರಿವರ್ತಿಸುವುದು ಜಿಮ್‌ಗೆ ಬಹು ಮೋಜಿನ ಸಂಗತಿಯಾಗಿ ಕಂಡಿತು. ಒಟ್ಟಿನಲ್ಲಿ ಇದನ್ನೆಲ್ಲಾ ಮುಗಿಸಿ ಚೆಂಗಪ್ಪನ ಚೊಟ್ಟೆಯಂಡ ಹೋಮ್ ಸ್ಟೇ ಸೇರಿದಾಗ ಮಧ್ಯಾಹ್ನ ಎರಡು ಹೊಡೆದಿತ್ತು.

ಚೆಂಗಪ್ಪನ ಮನೆ, ಬ್ರಿಟಿಷರ ಕಾಲದಲ್ಲಿ ಕಟ್ಟಿದ್ದ ಭವ್ಯವಾದ ಬಂಗಲೆ. ಹೊರಗಿನ ತೋಟವೇ ಎರಡು ಎಕರೆಗಳನ್ನೂ ಮೀರಿದ ಹರಹು. ಮೂರು ಉಪ್ಪರಿಗೆಗಳು, ಇಪ್ಪತ್ತು ಕೊಠಡಿಗಳಿದ್ದ ಅರಮನೆಯಂತಹ ಆ ಭವನ ಅಷ್ಟೇ ಶ್ರೀಮಂತಿಕೆಯಿಂದ ಸುಸಜ್ಜಿತವಾಗಿತ್ತು. ಹಳೆಯ ಕಾಲದ ತೇಗದ ಮತ್ತು ಬೀಟೆ (ರೋಸ್) ಮರದ ಕುರ್ಚಿ ಮೇಜುಗಳು, ಬೀಟೆ ಮರದ ಬಾಗಿಲುಗಳಿದ್ದ ಆ ಡ್ರಾಯಿಂಗ್ ಕೋಣೆಯ ಒಂದು ಭಾಗದಲ್ಲಿ ಅತಿಥಿಗಳು ಸುಖಾಸೀನರಾಗಲು ಅನುಕೂಲವಾಗುವಂತೆ ಅನೇಕ ಸೋಫಾಗಳಿದ್ದವು. ತಾರಸಿ ಎತ್ತರದಲ್ಲಿದುದರಿಂದ ಕೋಣೆಯ ಗೋಡೆಗಳು ಕೋಟೆಯ ಗೋಡೆಗಳಂತೆ ನಮ್ಮನ್ನು ಸುತ್ತುವರಿದಿದ್ದವು. ಒಂದು ಗೋಡೆಯನ್ನು ಹಳೆಯ ಕಾಲದ ತುಪಾಕಿಗಳು, ಕತ್ತಿಗಳು ಮತ್ತಿತರ ಆಯುಧಗಳು ಅಲಂಕರಿಸಿದ್ದರೆ, ಇನ್ನೊಂದು ಗೋಡೆಯ ಮೇಲೆ ಚೆಂಗಪ್ಪನ ಪೂರ್ವಜರ ಪ್ರತಾಪವನ್ನು ಸಾರಿಹೇಳುವ ಹೆಬ್ಬುಲಿ, ಕಡವೆಗಳ ತಲೆಗಳು ರಾಜ ಗಾಂಭೀರ್ಯದಿಂದ ಕೆಳಗೆ ಕುಳಿತಿದ್ದ ನಮ್ಮನ್ನು ತುಚ್ಛೀಕಾರದಿಂದ ವೀಕ್ಷಿಸುತ್ತಿದ್ದವು.

ಚೆಂಗಪ್ಪ ಮತ್ತು ಅವನ ಭಾರ್ಯೆ ದೇಚಮ್ಮ ನಮ್ಮನ್ನೆಲ್ಲಾ ಬಹು ಆದರದಿಂದ ಬರಮಾಡಿಕೊಂಡರು.

''ಬನ್ನಿ, ಮೊದಲು ನಿಮ್ಮ ಕೊಠಡಿಗಳನ್ನ ತೋರಿಸಿ ಬಿಡ್ತೇನೆ. ಕೈ ಕಾಲು ತೊಳೆದು ಇಲ್ಲೇ ಬಲಕ್ಕೆ ಇರುವ ಡೈನಿಂಗ್ ಹಾಲ್‌ಗೆ ಬಂದು ಬಿಡಿ. ಬಿಸಿ ಬಿಸಿ ಊಟ ತಯಾರಿದೆ'' ಎನ್ನುತ್ತಾ

ಚೆಂಗಪ್ಪ ನಮ್ಮನ್ನು ಕರೆದೋಯ್ದ. ನನಗೋ ಮದ್ದೂರಿನ ಹತ್ತಿರದ ಕದಂಬಂನಲ್ಲಿ ತಿಂದಿದ್ದ ಮಸಾಲೆ ದೋಸೆಯೇ ಇನ್ನೂ ಅರಗಿರಲಿಲ್ಲ. ನಿದ್ದೆ ಝುಕಾಯಿಸಿಕೊಂಡು ಬರುತ್ತಿತ್ತು. ಹಾಗಾಗಿ ಊಟ ಸ್ಕಿಪ್ ಮಾಡಿ ಮಲಗಿದೆ.

ನಾನು ಎದ್ದಾಗ ಸಂಜೆ ಆಗುತ್ತಾ ಬಂದಿತ್ತು. ಮುಖ್ಯ ಹಜಾರದಲ್ಲಿ ದೇಚಮ್ಮ ಸಿಕ್ಕರು. ''ನಿಮ್ಮ ಇಂಗ್ಲಿಷ್ ಮಿತ್ರರು ವಾಯು ಸೇವನೆಗೆಂದು ತೋಟದಲ್ಲಿ ಅಡ್ಡಾಡಲು ಹೋಗಿದ್ದಾರೆ. ನಿಮ್ಮ ಗೆಳೆಯ ಶರಲೇಖ ಪಕ್ಕದ ಲೈಬ್ರರಿಯಲ್ಲಿ ಕುಳಿತು ಏನನ್ನೋ ಓದುತ್ತಿದ್ದಾರೆ. ನಿಮಗೆ ಸ್ವಲ್ಪ ಕಾಫಿ ಕಳಿಸಲೇ?'' ಎಂದು ಬಹು ಸೌಜನ್ಯದಿಂದ ವಿಚಾರಿಸಿದರು. ಕಾಫಿಯನ್ನು ಲೈಬ್ರರಿಗೆ ಕಳಿಸಿ ಎಂದು ವಿನಂತಿಸಿ, ನಾನು ಶರಲೇಖನನ್ನು ನೋಡಲು ಹೋದೆ.

ಲೈಬ್ರರಿಯಲ್ಲಿ ಶರಲೇಖ ಯಾವುದೋ ಒಂದು ಪುಸ್ತಕವನ್ನು ಓದುವುದರಲ್ಲಿ ಮಗ್ನನಾಗಿದ್ದ. ನನ್ನನ್ನು ನೋಡಿ, ''ಇಗೋ ಈ ಪುಸ್ತಕ ಬಹು ಸ್ವಾರಸ್ಯವಾಗಿದೆ'' ಎನ್ನುತ್ತಾ ಅದನ್ನು ನನಗೆ ನೀಡಿದ. ಕೊಡವ ಸಂಸ್ಕೃತಿ ಎಂಬ ಆ ಪುಸ್ತಕ ಧಡೂತಿಯಾಗಿತ್ತು. ಸುಮಾರು ಎಂಟುನೂರು ಪುಟಗಳ ಮಹಾ ಹೊತ್ತಿಗೆ. ಕನ್ನಡದ್ದು. ಪುಟಗಳನ್ನು ಸುಮ್ಮನೆ ತಿರುವುತ್ತಿರುವಷ್ಟರಲ್ಲಿ ಸೇವಕನೊಬ್ಬ ಒಂದು ಟ್ರೇಯಲ್ಲಿ ಕಾಫಿ, ಎರಡು ಕಪ್ಪುಗಳು ಹಾಗೂ ಒಂದು ಪುಟ್ಟ ತಟ್ಟೆಯಲ್ಲಿ ಖಾರ ಹಾಕಿದ ಹುರಿದ ಗೋಡಂಬಿ ಇವುಗಳನ್ನು ತಂದಿಟ್ಟು ಹೋದ. ಕಾಫಿ ಕುಡಿದು ಮುಗಿಸುವ ಹೊತ್ತಿಗೆ ಚಂಗಪ್ಪ ಅಲ್ಲಿಗೆ ಬಂದ. ಅವನೊಂದಿಗೆ ದಂಪತಿಗಳಿಬ್ಬರು ನಡೆದು ಬಂದರು.

''ಇವರು ಪ್ರೊಫೆಸರ್ ಲಕ್ಷ್ಮಣಯ್ಯ ಈಕೆ ಇವರ ಪತ್ನಿ ರೇಖಾ. ನಿಮ್ಮಂತೆಯೇ ಇಲ್ಲಿಗೆ ಅತಿಥಿಗಳಾಗಿ ಬಂದಿದ್ದಾರೆ. ಈಗ ದುಬಾರೆ ಎಲಿಫೆಂಟ್ ಕ್ಯಾಂಪಿಗೆ ಭೇಟಿ ನೀಡಲು ಜೀಪುಗಳನ್ನು ವ್ಯವಸ್ಥೆ ಮಾಡಿದ್ದೇನೆ. ಬನ್ನಿ ಹೋಗಿ ಬರೋಣ'' ಎಂದ ಚಂಗಪ್ಪ. ಎಲ್ಲರೂ ಹೊರಟೆವು. ಜೀಪಿನ ಹತ್ತಿರ ಜಿಮ್ ಮತ್ತು ಜೆಸ್ಸಿಕಾ ನಮಗೆ ಕಾಯುತ್ತಿದ್ದರು. ದುಬಾರೆ ಮುಗಿಸಿ ಹಿಂತಿರುಗಿದಾಗ ಸಂಜೆ ಏಳೂವರೆ ಆಗಿತ್ತು. ಎಂಟು ಘಂಟೆಗೆ ಊಟ ಎಂದು ಮೊದಲೇ ಹೇಳಿದ್ದರಿಂದ ನಾವೆಲ್ಲ ಬೇಗನೆ ಸಿದ್ಧರಾಗಿ ಐದು ನಿಮಿಷ ಮುಂಚೆಯೇ ಡೈನಿಂಗ್ ಹಾಲ್ ಸೇರಿದೆವು. ಲಕ್ಷ್ಮಣಯ್ಯನವರನ್ನು ಪರಿಚಯಿಸಿಕೊಳ್ಳುವ ಉದ್ದೇಶದಿಂದ ಅವರ ಊರು, ವೃತ್ತಿಯ ಬಗ್ಗೆ ವಿಚಾರಿಸಿದೆ.

''ನಾನು ಮಂಗಳೂರಿನ ಕಾಲೇಜ್ ಒಂದರಲ್ಲಿ ಭಾಷಾ ಶಾಸ್ತ್ರದ ಪ್ರಾಧ್ಯಾಪಕ. ನನ್ನ ಪತ್ನಿ ರೇಖಾ ಅದೇ ಕಾಲೇಜಿನಲ್ಲಿ ಜೂವಾಲಜಿ ಬೋಧಿಸುತ್ತಾಳೆ. ಕೊಡವ ಭಾಷೆಯ ಉಗಮದ ಮೇಲೆ ವಿದ್ಯಾರ್ಥಿ ದೆಸೆಯಲ್ಲಿಯೇ ಒಂದು ಥೀಸಿಸ್ ಬರೆದಿದ್ದೆ. ಅದರಿಂದಾಗಿ ನನಗೆ ಮೈಸೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಸಹಾ ದೊರಕಿತು'' ಎಂದು ಲಕ್ಷ್ಮಣಯ್ಯ ತಮ್ಮನ್ನು ಪರಿಚಯಿಸಿಕೊಂಡರು.

ಕೊಡವ ಭಾಷೆಯ ಬಗ್ಗೆ ಮಾತನಾಡಿದ್ದನ್ನು ಕೇಳಿ ಚೆಂಗಪ್ಪ, ''ಕೊಡವ ಭಾಷೆಯ ಲಿಪಿ ಬಹು ಪುರಾತನವಾದದ್ದು ಅಂತ ಕೇಳಿದ್ದೆ. ಅದನ್ನು ಅಭ್ಯಾಸಮಾಡಿರುವವರನ್ನು ಇದೇ

ಮೊದಲು ನಾನು ಭೇಟಿ ಮಾಡುತ್ತಿರುವುದು. ನಮ್ಮ ವಂಶದ ಹಳೆಯ ದಾಖಲೆಗಳಲ್ಲಿ ಒಂದು ಅತ್ಯಂತ ಪುರಾತನ ದಾಖಲೆ ಕೊಡವ ಭಾಷೆಯಲ್ಲೇ ಬರೆದದ್ದು. ನಿಮಗೆ ತೋರಿಸಿದರೆ ಅದನ್ನು ಓದಿ ಸಾರಾಂಶ ಹೇಳಬಲ್ಲಿರಾ?'' ಅಂತ ಚೆಂಗಪ್ಪ ಕೇಳಿದರು.

ಅಷ್ಟರಲ್ಲಿ ದೇಚಮ್ಮ ಬಾಯಿಹಾಕಿ, ''ಪಾಪ ಅವರು ವಿಹಾರಕ್ಕಾಗಿ ಬಂದಿದ್ದಾರೆ. ಅವರಿಗೆ ನಿಮ್ಮ ಹಳೆಯ ಕಡತಗಳನ್ನೆಲ್ಲಾ ತೋರಿಸೋ ಅಗತ್ಯವಾದರೂ ಏನು?'' ಅಂತ ಹೇಳಿದರು.

ಲಕ್ಷ್ಮಣಯ್ಯ, ''ಇಲ್ಲ ಇಲ್ಲ, ನನಗೆ ಪುರಾತನ ಕಡತಗಳನ್ನು ಪರೀಕ್ಷಿಸುವುದು ಬಹಳ ಇಷ್ಟದ ಕೆಲಸ. ಖಂಡಿತ ಆ ದಾಖಲೆಯನ್ನು ತೋರಿಸಿ ನಿಮ್ಮ ಮುಂದೆಯೇ ಅದನ್ನು ಭಾಷಾಂತರಿಸಿ ಹೇಳುವೆ.'' ಅಂತ ಸೌಜನ್ಯದಿಂದ ಹೇಳಿದರು.

ಚೆಂಗಪ್ಪ ಎದ್ದು ಹೋಗಿ, ಹತ್ತು ನಿಮಿಷಗಳ ನಂತರ ಒಂದು ಜೆರಾಕ್ಸ್ ಮಾಡಿದ ಕಾಗದವನ್ನು ತೆಗೆದುಕೊಂಡು ಬಂದರು.

''ಹಳೆಯ ದಾಖಲೆ ಸುಮಾರು ಇನ್ನೂರು ವರ್ಷಗಳಷ್ಟು ಪುರಾತನ. ಹಾಗಾಗಿ ಅದರ ಪ್ರತಿಯೊಂದನ್ನು ಮಾತ್ರ ಇತರರಿಗೆ ತೋರಿಸಲು ಹೊರಕ್ಕೆ ತೆಗೆಯುವೆ. ಮೂಲಪ್ರತಿ ಬಹು ಶಿಥಿಲವಾಗಿದೆ'' ಎನ್ನುತ್ತಾ ಆ ಜೆರಾಕ್ಸ್ ಹಾಳೆಯನ್ನು ಲಕ್ಷ್ಮಣಯ್ಯನವರಿಗೆ ನೀಡಿದರು.

ಲಕ್ಷ್ಮಣಯ್ಯ ಬಹು ಉತ್ಸಾಹದಿಂದ ಆ ಹಾಳೆಯನ್ನು ಪರಿಶೀಲಿಸಲು ಪ್ರಾರಂಭಿಸಿದರು. ನಾನು ಅವರ ಪಕ್ಕದಲ್ಲೇ ಕುಳಿತಿದ್ದರಿಂದ ಆ ಹಾಳೆಯ ಮೇಲೆ ಕಣ್ಣಾಡಿಸಲು ಸಾಧ್ಯವಾಯಿತು. ನನಗೆ ಅರ್ಥವಾಗದ ಲಿಪಿ ಅದು. ಮೇಲೆ ಒಂದು ತಲೆಬರಹ. ಅದರ ಕೆಳಗೆ ಆರು ಸಾಲುಗಳು. ಅಷ್ಟೇ ಬೇರೇನೂ ಇರಲಿಲ್ಲ ಆ ಹಾಳೆಯಲ್ಲಿ. ಲಕ್ಷ್ಮಣಯ್ಯ ತಲೆಬರಹವನ್ನು ಬಹು ಸುಲಭವಾಗಿ ಭಾಷಾಂತರಿಸಿದರು. ''ಇಲ್ಲಿ ನೋಡಿ, ಮೊದಲು ಈ ತಲೆಬರಹ. ಇದನ್ನು ಭಾಷಾಂತರಿಸಿದರೆ ಅದು ಹೀಗಾಗುತ್ತದೆ. ಭಜಿಸಿರೈ ಈ ಶ್ಲೋಕ ಮಂಗಳವು ವಂಶಕೆ. ಇದರ ಕೆಳಗೆ ಶ್ಲೋಕದ ಸಾಲುಗಳಿವೆ ಆರು ಸಾಲುಗಳಿರುವುದರಿಂದ ಇದೊಂದು ಷಟ್ಪದಿ. ..................'' ಅಷ್ಟು ಹೇಳಿದ ನಂತರ ಲಕ್ಷ್ಮಣಯ್ಯ ಅದನ್ನು ಓದುವುದರಲ್ಲೇ ಮಗ್ನರಾಗಿ ಮಾತು ನಿಲ್ಲಿಸಿದರು. ಒಂದೆರಡು ನಿಮಿಷಗಳ ಕಾಲ ನೀರವತೆ. ಅನಂತರ ನಿದ್ರೆಯಿಂದ ಎಚ್ಚೆತ್ತವರಂತೆ ಲಕ್ಷ್ಮಣಯ್ಯ, ''ಕ್ಷಮಿಸಿ, ಈ ಶ್ಲೋಕದ ಲಿಪಿ ನನಗೆ ತಿಳಿದಿರುವ ಲಿಪಿಗಿಂತ ಸ್ವಲ್ಪ ಬೇರೆಯಾಗಿರುವಂತೆ ಕಾಣುತ್ತಿದೆ. ಇದನ್ನು ಇಂದು ನನ್ನ ಕೊಠಡಿಗೆ ತೆಗೆದುಕೊಂಡು ಹೋಗಿ, ಭಾಷಾಂತರಿಸಿ ಬೆಳಗ್ಗೆ ಕೊಟ್ಟರೆ ಪರವಾಗಿಲ್ಲವೇ'' ಅಂತ ವಿನಯದಿಂದ ವಿನಂತಿಸಿದರು.

ಚೆಂಗಪ್ಪ ''ಧಾರಾಳವಾಗಿ. ತುಂಬಾ ತೊಂದರೆ ತೆಗೆದುಕೊಳ್ಳಬೇಡಿ. ಇಷ್ಟು ದಿನಗಳಿಂದ ಅದು ಸುಮ್ಮನೆ ಬೀರೂವಿನಲ್ಲಿ ಕೂತಿತ್ತು. ಈಗ ಅದಕ್ಕೆ ಮುಕ್ತಿ ಕಾಣೋಹಾಗಿದೆ.'' ಅಂತ ಹೇಳಿದ ನಂತರ ನಾವೆಲ್ಲಾ ಊಟವನ್ನು ಮುಂದುವರಿಸಿದೆವು.

ಮಾರನೆಯ ಬೆಳಗಿನ ಉಪಹಾರಕ್ಕೆ ನಮ್ಮೆಲ್ಲರ ಜೊತೆಗೆ ರೇಖಾ ಒಬ್ಬರೇ ಬಂದು ಕುಳಿತರು. ''ರಾತ್ರಿಯೆಲ್ಲಾ ಆ ಶ್ಲೋಕಾನ ಭಾಷಾಂತರ ಮಾಡೋದರಲ್ಲೇ ಕಳೆದರು. ಬೆಳಗ್ಗೆ ಎದ್ದು, ರಾತ್ರಿಯೆಲ್ಲಾ ನಿದ್ದೆ ಇಲ್ಲದೇ ಮೈ ಜಡ್ಡುಗಟ್ಟಿದೆ. ಇಲ್ಲೇ ತೋಟದಲ್ಲೇ ಸ್ವಲ್ಪ

ಅಡ್ಡಾಡಿಕೊಂಡು ಬರ್ತೀನಿ. ನೀನು ಉಪಹಾರಕ್ಕೆ ಹೋಗು ಅಂತ ನನ್ನನ್ನು ಇಲ್ಲಿಗೆ ಕಳಿಸಿ ಅವರು ಅಡ್ಡಾಡಲು ಹೋದರು'' ಎಂದು ರೇಖಾ ಹೇಳಿದರು.

ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಶರಲೇಖ ಮತ್ತು ನಾನು ಚೆಂಗಪ್ಪನೊಡನೆ ಮಾತನಾಡುತ್ತಾ ಕುಳಿತಿದ್ದಾಗ ಒಮ್ಮೆಲೇ ರೇಖಾ ನಮ್ಮಲ್ಲಿಗೆ ಗಾಬರಿಯಿಂದ ಬಂದರು. ''ಇವರು ಬೆಳಗ್ಗೆ ಹೋದೋರು ಇನ್ನೂ ಹಿಂದಕ್ಕೆ ಬಂದೇ ಇಲ್ಲ. ನನಗೇಕೋ ಹೆದರಿಕೆ ಆಗ್ತಾ ಇದೆ. ಏನು ಮಾಡಲಿ?'' ಅಂತ ಆಕೆ ಹಲುಬಿದರು. ಶರಲೇಖ ಆಕೆಗೆ ಸಮಾಧಾನ ಹೇಳುತ್ತಾ, ''ಗಾಬರಿ ಬೇಡಾಮ್ಮ. ಮೊದಲು ಮುಖ್ಯ ದ್ವಾರದ ಸೆಕ್ಯೂರಿಟಿಯನ್ನು ವಿಚಾರಿಸೋಣ. ಅವರು ಹೊರಗೆ ಹೋಗಿದ್ದಾರೆಯೇ ಅಥವಾ ಇಲ್ಲೇ ತೋಟದಲ್ಲೇ ಇದ್ದಾರೆಯೇ ಅನ್ನೋದು ತಿಳಿಯುತ್ತೆ'' ಅಂದ ತಕ್ಷಣ ಚೆಂಗಪ್ಪ ತನ್ನ ಮೊಬೈಲಿನಲ್ಲಿ ಸೆಕ್ಯೂರಿಟಿಗೆ ಫೋನ್ ಮಾಡಿದ. ಬೆಳಗಿನಿಂದ ಯಾರೂ ಗೇಟಿನ ಆಚೆ ಹೋಗಿಲ್ಲ ಎಂಬ ಅಂಶ ಅವನಿಂದ ತಿಳಿಯಿತು. ಚೆಂಗಪ್ಪ ತನ್ನ ತೋಟದ ಆಳುಗಳನ್ನ ಕರೆಯಿಸಿ ತೋಟವನ್ನೆಲ್ಲಾ ಹುಡುಕಲು ಹೇಳಿದ. ಚೆಂಗಪ್ಪ ಇದನ್ನೆಲ್ಲಾ ಮಾಡುತ್ತಿದ್ದಾಗ ಶರಲೇಖ ಯಾವುದೋ ಗಾಢವಾದ ಆಲೋಚನೆಯಲ್ಲಿ ಮುಳುಗಿದ್ದ. ಅನಂತರ ಅಲ್ಲೇ ಕುಳಿತಿದ್ದ ರೇಖಾ ಅವರನ್ನು ಉದ್ದೇಶಿಸಿ, ''ರಾತ್ರಿಯೆಲ್ಲಾ ಭಾಷಾಂತರ ಮಾಡುತ್ತಿದ್ದರು ಎಂದು ಹೇಳಿದಿರಿ. ಆ ಕಾಗದಗಳು ರೂಮಿನಲ್ಲೇ ಇವೆಯೇ?'' ಅಂತ ಕೇಳಿದ. ಆಕೆ ಆ ಭಾಷಾಂತರದ ಕಾಗದಗಳನ್ನು ಹುಡುಕಲು ತಮ್ಮ ರೂಮಿಗೆ ತೆರಳಿದರು. ಐದು ನಿಮಿಷದಲ್ಲಿ ಆಕೆ ಮರಳಿ ಬಂದು ಶರಲೇಖನಿಗೆ ಹಲವು ಕಾಗದಗಳನ್ನು ನೀಡಿದರು. ಶರಲೇಖ ಅವನ್ನು ಪರೀಕ್ಷಿಸಿ, ಇವು ಅವರ ಭಾಷಾಂತರ ಪ್ರಯತ್ನದ ಹಲವು ಹಂತಗಳು. ಅಂತಿಮ ಭಾಷಾಂತರ ಲಕ್ಷ್ಮಣಯ್ಯನವರೇ ತೆಗೆದುಕೊಂಡು ಹೋಗಿರಬೇಕು. ಇಲ್ಲಿರುವ ಪ್ರತಿಗಳಲ್ಲಿ ಆದಷ್ಟು ಹೆಚ್ಚು ಭಾಷಾಂತರವಾಗಿರುವ ಪ್ರತಿ ಇದು. ಇದರಲ್ಲಿ ಆ ಶ್ಲೋಕದ ಅರ್ಥ ಹೀಗಿದೆ'' ಎಂದು ಹೇಳಿ ಶ್ಲೋಕವನ್ನು ಓದಲು ಪ್ರಾರಂಭಿಸಿದ.

*''ಸೂರ್ಯ ತುದಿ ಗೋಪುರಕೆ ಛಾಯೆ ತುದಿ ಆಲಕ್ಕೆ*
*ಹೆಜ್ಜೆಗಳ ಓಡಾಟ ಎಲ್ಲ ದಿಸೆಗಳಲಿ*
*ಹತ್ತು ಹತ್ತುಗಳು ಉತ್ತರಕ್ಕಿರಲಾಗೆ*
*ಎಂಟು ಎಂಟುಗಳು ಪೂರ್ವದೆಡೆಗೆ*
*ಆರು ದಕ್ಷಿಣ ಮುಗಿಸೆ ಪಶ್ಚಿಮಕೆ ಪಾತಾಳ*
*ವಂಶ ನಿರ್ವಹಕನಿಗೆ ...... ಸಂಪತ್ತಿ''*

''ಈ ಷಟ್ಪದಿಯನ್ನು ನೋಡಿದರೆ ಯಾವುದೋ ಪುರಾತನ ನಿಧಿಯನ್ನು ಹುದುಗಿಸಿರುವ ಜಾಗದ ನಕ್ಷೆಯಂತಿದೆ. ಬಹುಶಃ ಲಕ್ಷ್ಮಣಯ್ಯ ಇದರಿಂದ ಪ್ರಚೋದಿತರಾಗಿ ತಾವೇ ಇದರ ಜಾಡಿನಲ್ಲಿ ಹೊರಟಿದ್ದರೆ, ನಾವು ಇದನ್ನನುಸರಿಸಿ ಅವರನ್ನು ಹಿಂಬಾಲಿಸುವುದೇ ನಮಗಿರುವ ಮಾರ್ಗ. ನೀವು ಏನು ಹೇಳುತ್ತೀರಿ ಚೆಂಗಪ್ಪ ?'' ಅಂತ ಶರಲೇಖ ಕೇಳಿದ. ಚೆಂಗಪ್ಪ ''ನೀವು ಖ್ಯಾತ ಪತ್ತೇದಾರರು. ನೀವು ಹೇಳಿದಂತೆ ನಾನು ನಡೆಯುವೆ. ದೇವರ ದಯೆಯಿಂದ

ಲಕ್ಷ್ಮಣಯ್ಯನವರಿಗೆ ಏನೂ ಆಘಾತವಾಗಿರದಿದ್ದರೆ ಸಾಕು'' ಎಂದು ಹೇಳಿದರು. ಶರಲೇಖ ಪರಿಸ್ಥಿತಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡ.

''ಈ ಶ್ಲೋಕದ ಮೊದಲನೆಯ ಸಾಲಿನಲ್ಲಿ ಗೋಪುರ ಎಂಬ ಪ್ರಯೋಗ ಇದೆ. ನಿಮ್ಮ ಬಂಗಲೆಗೆ ಯಾವುದಾದರೂ ಗೋಪುರವಿದೆಯೇ?''

''ಬ್ರಿಟೀಷರು ಈ ಬಂಗಲೆಯನ್ನು ಕಟ್ಟಿದಾಗ ಬಲಗಡೆಯ ತಾರಸಿಯ ಮೇಲೆ ಒಂದು ಕಂಭವನ್ನು ಕಟ್ಟಿ ಅದರ ಮೇಲೆ ಮಿಂಚು ಗ್ರಾಹಕವೊಂದನ್ನು ಇರಿಸಿದ್ದರು. ಅದನ್ನ ನಾವು ಮಿಂಚಿನ ಗೋಪುರ ಅನ್ನುವುದು ಹಿಂದಿನಿಂದ ಬಂದ ಪದ್ದತಿ.'' ಎಂದರು ಚೆಂಗಪ್ಪ.

''ಸರಿ. ಆ ಮಿಂಚಿನ ಗೋಪುರದ ತುದಿಗೆ ಸೂರ್ಯ ಬಂದಾಗ ನಿಮ್ಮ ತೋಟದ ಆಲದ ಮರದ ಛಾಯೆಯ ತುದಿಯಿಂದ ನಮ್ಮ ಹುಡುಕಾಟ ಪ್ರಾರಂಭವಾಗಬೇಕು. ಬನ್ನಿ ತೋಟಕ್ಕೆ ಹೋಗಿ ನಮ್ಮ ಹುಡುಕಾಟ ಪ್ರಾರಂಭಿಸೋಣ'' ಎನ್ನುತ್ತಾ ಶರಲೇಖ ತೋಟದ ಕಡೆಗೆ ಓಡಿದ. ನಾವೆಲ್ಲಾ ಅವನನ್ನು ಹಿಂಬಾಲಿಸಿದೆವು. ಆಗ ಸಮಯ ಸುಮಾರು ಹನ್ನೆರಡಾಗಿತ್ತು. ಸೂರ್ಯ ನೆತ್ತಿಯ ಮೇಲಿದ್ದ. ಮಿಂಚಿನ ಗೋಪುರದ ತುದಿಯಲ್ಲಿ ಸೂರ್ಯ ಕಾಣಿಸಬೇಕಾದರೆ ಸಂಜೆ ನಾಲ್ಕರವರೆಗೆ ಕಾಯಬೇಕಾಗಿತ್ತು. ನಮ್ಮೊಂದಿಗಿದ್ದ ಜಿಮ್ ಅದಕ್ಕೊಂದು ಪರಿಹಾರ ಸೂಚಿಸಿದ. ಮಿಂಚಿನ ಗೋಪುರದ ಎತ್ತರ ಮತ್ತು ಆಲದ ಮರದ ಎತ್ತರ ಇವು ತಿಳಿದಿದ್ದರೆ ಆಲದ ಮರದ ನೆರಳಿನ ಉದ್ದವನ್ನು ತ್ರಿಕೋಣಮಿತಿಯ ಸಹಾಯದಿಂದ ತಿಳಿಯಬಹುದು ಎಂದು ಜಿಮ್ ಹೇಳಿದ ನಂತರ ಅವರಿಬ್ಬರೂ ಎತ್ತರಗಳನ್ನು ಅಳೆಯಲು ಪ್ರಾರಂಭಿಸಿದರು. ನನ್ನಂತಹ ಮಂದಮತಿಗೆ ತ್ರಿಕೋಣಮಿತಿ ತಿಳಿಯುವುದಾದರೂ ಹೇಗೆ? ಹಾಗಾಗಿ ನಾನು ಲಕ್ಷ್ಮಣಯ್ಯನ ರಕ್ಷೆಗಾಗಿ ವಿಷ್ಣು ಸಹಸ್ರನಾಮವನ್ನು ಜಪಿಸಲು ಪ್ರಾರಂಭಿಸಿದೆ.

ಕೊನೆಗೆ ಆಲದ ಮರದ ಪಶ್ಚಿಮಕ್ಕೆ ಒಂದು ಬಿಂದುವನ್ನು ನೆರಳಿನ ತುದಿ ಎಂದು ಶರಲೇಖ ನಿರ್ಧರಿಸಿದ ಮೇಲೆ ಅಲ್ಲಿಂದ ಹತ್ತು ಹತ್ತು ಅಂದರೆ ನೂರು ಹೆಜ್ಜೆಗಳನ್ನಿಡುತ್ತಾ ಆತ ಉತ್ತರಕ್ಕೆ ನಡೆದ. ಅಲ್ಲಿಂದ ಅರುವತ್ತ ನಾಲ್ಕು ಹೆಜ್ಜೆಗಳು ಪೂರ್ವಕ್ಕೆ ನಡೆಯುವ ಹೊತ್ತಿಗೆ ನಾವು ಬಂಗಲೆಯ ಹಿಂಭಾಗಕ್ಕೆ ಬಂದಿದ್ದೆವು. ದಕ್ಷಿಣಕ್ಕೆ ಆರು ಹೆಜ್ಜೆಗಳನ್ನು ಇಟ್ಟು ಪಶ್ಚಿಮಕ್ಕೆ ತಿರುಗಿದಾಗ ಬಂಗಲೆಯ ಹಿಂದಿನ ಗೋಡೆ ನಮ್ಮ ಮುಂದಿತ್ತು. ಅಲ್ಲಿ ಒಂದು ಅರ್ಧ ತೆರೆದ ಬಾಗಿಲು. ''ಈ ಕೊಠಡಿಯಲ್ಲಿ ಏನಿದೆ?'' ಅಂತ ಶರಲೇಖ ಕೇಳಿದ. ''ಅದು ಇಜ್ಜಲು ಉಗ್ರಾಣ. ಈಗ ಅದನ್ನು ಬಳಸುತ್ತಲೇ ಇಲ್ಲ.'' ಅಂತ ಚೆಂಗಪ್ಪ ಉತ್ತರಿಸಿದರು. ಉಗ್ರಾಣದ ಒಳಕ್ಕೆ ಹೋದೆವು. ಅಲ್ಲಿ ನೆಲದ ಮೇಲೆ ಒಂದು ನೆಲ ಮಾಳಿಗೆಯ ಬಾಗಿಲು. ಶರಲೇಖ ಮತ್ತು ಜಿಮ್ ಇಬ್ಬರೂ ಸೇರಿ ಬಾಗಿಲನ್ನು ಎಳೆದು ತೆರೆದರು. ಒಳಗೆ ಕತ್ತಲು. ಬಾಗಿಲಿನ ಹತ್ತಿರ ಶರಲೇಖ ನಿಂತು ''ಲಕ್ಷ್ಮಣಯ್ಯ'' ಅಂತ ಕೂಗಿದ. ನಿರುತ್ತರ. ಅಷ್ಟರಲ್ಲಿ ತೋಟದ ಆಳೊಬ್ಬ ಓಡಿಬಂದ. ಅವನ ಹಿಂದೆ ಲಕ್ಷ್ಮಣಯ್ಯ. ''ಏನು ಎಲ್ಲಿ ಹೋಗಿದ್ದಿರಿ? ಹುಷಾರಾಗಿದ್ದೀರ ತಾನೆ? ಅಂತ ಚೆಂಗಪ್ಪ ಕಳಕಳಿಯಿಂದ ಕೇಳಿದರು. ಲಕ್ಷ್ಮಣಯ್ಯ, ''ನಿಮಗೆಲ್ಲಾ ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆ ಇರಲಿ. ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದರಿಂದ ತೋಟದಲ್ಲಿ ಸ್ವಲ್ಪ

ಅಡ್ಡಾಡೋಣವೆನಿಸಿತು. ಅಲ್ಲಿ ಒಂದೆಡೆ ಒಂದು ಒಣ ಹುಲ್ಲಿನ ಮೆದೆ ಕಾಣಿಸಿತು. ಸ್ವಲ್ಪ ಮಲಗಿದರೆ ಹೇಗಿರುತ್ತೆ ಅಂತ ಪರೀಕ್ಷಿಸಲು ಹಾಗೆಯೇ ಒರಗಿದೆ. ನಿದ್ರೆ ತಾನಾಗಿಯೇ ಬಂತು. ಸ್ವಲ್ಪ ಹೊತ್ತಿನ ಹಿಂದೆ ಎಚ್ಚರವಾಗಿ ಅಲ್ಲಿಂದ ಎದ್ದು ಕೊಠಡಿಗೆ ಹೋದೆ. ರೇಖಾ ನೀವುಗಳೆಲ್ಲಾ ನನಗಾಗಿ ತೋಟದಲ್ಲಿ ಹುಡುಕಾಡುತ್ತಿರುವಿರೆಂದು ಹೇಳಿದಳು. ಅದಕ್ಕೆ ತ್ವರೆಯಿಂದ ಇಲ್ಲಿಗೆ ಬಂದೆ'' ಅಂದರು ಲಕ್ಷ್ಮಣಯ್ಯ.

''ನೆಲಮಾಳಿಗೆಯಲ್ಲಿ ಏನಿದೆ ನೋಡೋಣವೇ?'' ಅಂತ ಜಿಮ್ ಕೇಳಿದ. ಸೆಕ್ಯೂರಿಟಿಯಿಂದ ಟಾರ್ಚ್‌ಗಳನ್ನು ತರಿಸಿ ಒಬ್ಬೊಬ್ಬರಾಗಿ ನೆಲಮಾಳಿಗೆಯಲ್ಲಿ ಇಳಿದೆವು. ಅಲ್ಲಿ ಸಾಲು ಸಾಲಾಗಿ ಹಳೆಯ ಕಾಲದ ಮರದ ಬೀರುಗಳಿದ್ದವು. ಅವುಗಳ ಒಳಗಡೆ ತಾಳೆಯ ಪಟ್ಟಿಗಳ ಮೇಲೆ ಬರೆದು ಸಿದ್ಧ ಪಡಿಸಿದ್ದ ನೂರಾರು ಗ್ರಂಥಗಳಿದ್ದವು. ಅಷ್ಟೇ. ಯಾವ ವಿಧವಾದ ನಿಧಿಯೂ ಕಾಣಿಸಲಿಲ್ಲ. ಶರಲೇಖ ಲಕ್ಷ್ಮಣಯ್ಯನವರ ಕಡೆ ತಿರುಗಿ ''ಲಕ್ಷ್ಮಣಯ್ಯನವರೇ ನಿಮ್ಮ ಷಟ್ಪದಿಯ ಕೊನೆಯ ಸಾಲಿನ ಕಾಣೆಯಾಗಿರುವ ಪದ ಸಿಕ್ಕಿತು.'' ಅಂದ. ಲಕ್ಷ್ಮಣಯ್ಯ ''ಏನದು ಆ ಪದ?'' ಅಂತ ಪ್ರಶ್ನಿಸಿದರು. ಅವರಿಗೆ ಶರಲೇಖ ಉತ್ತರಿಸಿದ. ''ಷಟ್ಕ. ಈ ತಾಳೆಗರಿ ಗ್ರಂಥಗಳನ್ನೆಲ್ಲಾ ಓದಿ ಅರಗಿಸಿಕೊಂಡರೆ ಖಂಡಿತವಾಗಿ ಶಮಾದಿ ಷಟ್ಕ ಸಂಪತ್ತಿ ವಂಶ ನಿರ್ವಹಕನಿಗೆ ಸಿಗುವುದರಲ್ಲಿ ಸಂಶಯವಿಲ್ಲ.''

☆

---

ನಮ್ಮ ಜನ ವಿದೇಶದಲ್ಲಿ ಇಟ್ಟಿರೋ ಕಪ್ಪು ಹಣ ವಾಪಸ್ ತರೋದೇನೋ ಸರಿ, ಆದರೆ ನಮ್ಮ ದೇಶದಲ್ಲೇ ನಮ್ಮ ರಾಜಕಾರಣಿಗಳು ಅಡಗಿಸಿಟ್ಟಿರೋ ಕಪ್ಪು ಹಣ ಈಚೆ ತೆಗೆಯೋಕೂ ಒಂದು ದಾರಿ ಹುಡುಕಬೇಕಲ್ವಾ?



# ಕತ್ತೆ ಮತ್ತು ಎಮ್ಮೆ - ಒಂದು ಮಿನಿ ವ್ಯಾಖ್ಯಾನ

**- ಸಿ.ಆರ್. ಸತ್ಯ**

ಇತ್ತೀಚೆಗೆ ನಮ್ಮ ನಾಯಕರೊಬ್ಬರು ಕತ್ತೆಗಳಿಗೆ ರಾಜ್ಯ ಪ್ರಶಸ್ತಿ ಕೊಟ್ಟು, ಸರ್ಕಾರ ಪ್ರಶಸ್ತಿ ಕೊಡುವ ರೀತಿಗಳ ಬಗ್ಗೆ ಪ್ರತಿಭಟನೆ ನಡೆಸಿದರು ಅಂತ ವಾರ್ತಾ ಪತ್ರಿಕೆಗಳಲ್ಲಿ ಓದಿ ಬಹಳ ಸಂತೋಷವಾಯಿತು. ನಾನೊಬ್ಬ ಕತ್ತೆಯ ಪ್ರೇಮಿ. ಬರೀ ಕತ್ತೆ ಮಾತ್ರವಲ್ಲ, ನನಗೆ ಎಮ್ಮೆಯ ಮೇಲೂ ಬಹಳ ಪ್ರೀತಿ ವಿಶ್ವಾಸವಿದೆ. ಕಾರಣವೇನೆಂದು ಹೇಳುತ್ತೇನೆ. ನನ್ನ ಚಿಕ್ಕ ವಯಸ್ಸಿನಲ್ಲಿ ನಾವು ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿದ್ದಾಗ ನಮ್ಮ ಪಕ್ಕದ ಮನೆಯ ಶೆಡ್‌ನಲ್ಲೇ ಒಂದು ಧೋಬಿ ಸಂಸಾರವಿತ್ತು. ಆ ಸಂಸಾರದಲ್ಲಿ ಎರಡು ಹಿರಿಯ ಕತ್ತೆಗಳು (ಅಪ್ಪ-ಅಮ್ಮ), ಒಂದು ಮರಿ ಕತ್ತೆಯೂ ಸೇರಿದ್ದವು. ವಾರಕ್ಕೆ ಎರಡು ಬಾರಿಯೋ ಏನೋ ಮಲ್ಲೇಶ್ವರಂನ ಸ್ವಿಮ್ಮಿಂಗ್ ಪೂಲ್ ಬಳಿಯಿದ್ದ ಧೋಬಿ ಘಾಟ್‌ಗೆ ಅವುಗಳ ಮೇಲೆ ಬಟ್ಟೆಗಳನ್ನು ಹೇರಿಕೊಂಡು ಹೋಗಿ ವಾಪಸ್ ತರುವುದು ವಾಡಿಕೆಯಾಗಿತ್ತು. ಆಫ್ ಡ್ಯೂಟಿ ಸಮಯದಲ್ಲಿ ನಮ್ಮ ಮನೆಯ ಗೇಟ್ ಮುಂದೆ ಈ ಕತ್ತೆ ಸಂಸಾರ ಹುಲ್ಲನ್ನೋ ಹಳೇ ಪೇಪರ್ ನೋ ಜಗಿಯುತ್ತಾ ಕಾಲ ಕಳೆಯುತ್ತಿತ್ತು. ಆಗ ನಾನೂ ನಮ್ಮ ಮನೆ ಗೇಟ್ ಹತ್ತಿರ ನಿಂತ್ಕೊಂಡು ಅವನ್ನೇ-ಅದರಲ್ಲೂ ಆ ಮರಿ ಕತ್ತೇನೇ ನೋಡುತ್ತಾ ನಿಂತಿರುತ್ತಿದ್ದೆ (ಪಾಠ ಓದೋದು ಬಿಟ್ಟು!) ಇದನ್ನ ನೋಡಿ ಸಹಿಸಿಕೊಳ್ಳುವುದಕ್ಕಾಗದೇ ನಮ್ಮ ತಂದೆ ''ನೀನೂ ಅವುಗಳ ತರಹ ಒಂದು ಕತ್ತೇನೇ ಕಣೋ'' ಅಂತ ಬಯ್ಯುತ್ತಿದ್ದರು. ಅವರ ಬೈಗಳು ಎಷ್ಟೇ ಇದ್ದರೂ, ನನಗೆ ಕತ್ತೆಗಳ ಮೇಲೆ ಪ್ರೀತಿ ಹೆಚ್ಚಿತ್ತೇ ಹೊರತು, ಕಡಿಮೆಯಂತೂ ಆಗಲಿಲ್ಲ. ಅದರಲ್ಲೂ ಆ ಮರಿ ಕತ್ತೆ ಇತ್ತಲ್ಲ - ಅದು ಎಷ್ಟು ಮುದ್ದಾಗಿತ್ತು ಅಂತೀರಿ! ಅದನ್ನ ಎಷ್ಟೋ ಸಲ ಅದರ ಅಪ್ಪ ಅಮ್ಮನಿಗೆ ಕಾಣಿಸದ ಹಾಗೆ ಮುಟ್ಟಾನೂ ಇದ್ದೆ! ಇದನ್ನ ನೋಡಿದ ನಮ್ಮ ತಂದೆ ''ಹೀಗೇ ಮುಟ್ಟುತ್ತಾ ಇರು, ಅಮ್ಮ ಅತ್ತೆ ನಿನಗೆ ಒಂದು ಸಲ ಒದ್ದು ಬುದ್ಧಿ ಕಲಿಸುತ್ತೆ. ಆಗಲೇ ನಿನಗೆ ಕತ್ತೆಯ ವ್ಯಾಮೋಹ ಬಿಡೋದು'' ಅಂತಾನೂ ಅಂದಿದ್ರು.

ಅವುಗಳ ಮೇಲೆ ನನಗೆ ಪ್ರೀತಿಯೇನೋ ಹುಟ್ಟಿತು ಸರಿ, ಆದರೆ ಅವುಗಳ ಮೇಲೆ ನನಗೆ ಗೌರವ ಭಾವನೆ ಹೇಗೆ ಬಂತು ಅಂತ ನೀವು ಕೇಳಬಹುದು. ನೋಡಿ, ಕತ್ತೆಗಳು ಕರ್ಮ ಜೀವಿಗಳು ಕೊಟ್ಟಿದ್ದನ್ನ ತಿನ್ನುತ್ತವೆ. ಹುಲ್ಲೂ ಆದರೂ ಆಯಿತು, ರದ್ದಿ ಆದರೂ ಆಯಿತು. ಮೈಮೇಲೆ ಎಷ್ಟು ಹೊರೆ ಹಾಕಿದ್ರೂ, ಎಲ್ಲಿಗೆ ಅಂದರೆ ಅಲ್ಲಿಗೆ ಹೊತ್ಕೊಂಡು ಹೋಗುತ್ವೆ. ಸಂಬಳ ಕೇಳಲ್ಲ, ಬೋನಸ್ ಕೇಳಲ್ಲ! ನೋಡೋಕ್ಕೂ ಮುದ್ದಾಗಿ ಇರುತ್ವೆ. ಅವು ಸಂಗೀತ ಪ್ರೇಮಿಗಳೂ ಕೂಡ. ಕರ್ನಾಟಕ-ಹಿಂದೂಸ್ತಾನಿ ಶೈಲಿಗಳನ್ನು ಮಿಶ್ರಣ ಮಾಡ್ಕೊಂಡು ಒಳ್ಳೇ ರಾಗ ಶೃತಿಯಲ್ಲಿ ಹಾಡೂ ಹೇಳುತ್ವೆ. ಕೆಲವು ರಸಿಕರು ಅದರ ಗಂಟಲು ದೊಡ್ಡದು ಅಂತ ಟೀಕೆ ಮಾಡೋದೂ ಉಂಟು. ಅದರಿಂದ ನಮ್ಮಂತಹವರಿಗೆ ಏನೂ ಪ್ರಾಬ್ಲಮ್ ಇಲ್ಲ ಬಿಡಿ. ಈ

ವಿಷಯ ನಿಮಗೆ ಗೊತ್ತೋ ಇಲ್ಲವೋ – ಅವುಗಳು ಕರಾಟೆ ಪರಿಣತರೂ ಕೂಡ! ಕತ್ತೆ ಮನಸ್ಸು ಮಾಡಿ ಒಂದು ಕಿಕ್ ಕೊಟ್ಟರೆ ಸಾಕು, ಎಂತಹ ಬ್ಲ್ಯಾಕ್ ಬೆಲ್ಟೇ ಆಗಿರಲಿ, ಅವಕ್ಕಾಗಿ ನೆಲ ಕಚ್ಚುತ್ತಾನೆ! ನನ್ನ ಪ್ರಕಾರ ''ಕಾಯಕವೇ ಕೈಲಾಸ'' ಎಂಬ ನಾಣ್ಣುಡಿಗೆ ಈ ಕತ್ತೆಗಳು ಆದರ್ಶ ಪ್ರತಿರೂಪ! ಯಾರಿಗೂ ತೊಂದರೆ ಕೊಡದೆ, ಹೇಳಿದ ಕೆಲಸ ಮಾಡಿಕೊಂಡು, ಯಾವ ಆಸೆ ಆಕಾಂಕ್ಷೆಗಳೂ ಇಲ್ಲದೆ, ಸುಖ ಜೀವನ ನಡೆಸುತ್ವೆ. ನಾವೆಲ್ಲರೂ ಕತ್ತೆಗಳಾಗಿದ್ದರೆ, ಈ ಸಮಾಜ ಎಷ್ಟು ಚೆನ್ನಾಗಿ ಇರುತ್ತಿತ್ತೋ ಏನೋ!

ಇನ್ನು ಎಮ್ಮೆಗೂ ನನಗೂ ಏನು ಸಂಬಂಧ ಅಂತ ನೀವು ಹುಬ್ಬೇರಿಸಬಹುದು. ಅದೇ ಮಲ್ಲೇಶ್ವರಂನ ಸ್ಯಾಂಕಿ ಟ್ಯಾಂಕ್‌ನಲ್ಲಿ ನಾನು ಈಜು ಕಲೀತಿದ್ದೆ. ಆಗ ಈ ಟ್ಯಾಂಕು, ಅದರ ಪರಿಸರ ಈಗ ಇರೋ ಹಾಗೆ ಇರಲಿಲ್ಲ. ಯಾವುದೋ ಹಳ್ಳಿ ಪಕ್ಕದ ಕೆರೆಯಂತಿತ್ತು. ಈಜೋವಾಗ ನನಗಿದ್ದ ಸಂಗಾತಿಗಳ ಜೊತೆಗೆ ನಾಲ್ಕೋ ಐದೋ ಎಮ್ಮೆಗಳೂ ಇರುತ್ತಿದ್ದವು. ಅವು ಪಕ್ಕದ ವಯ್ಯಾಲಿ ಕಾವಲ್‌ನಲ್ಲಿ ಮನೆ ಮಾಡಿದ್ದವಂತೆ. ಬೆಳಗಿನ ಡ್ಯೂಟಿ ಮುಗಿಸಿಕೊಂಡು ಅವು ಅಲ್ಲಿಗೇ ಸ್ನಾನಕ್ಕೆ ಬಂದು ಮಧ್ಯಾಹ್ನದ ತನಕ ಎಷ್ಟು ಸಂತೋಷವಾಗಿ ಕಾಲ ಕಳೆಯೋವು ಅಂದರೆ, ಅವು ''ತಾರಕ್ಕ ತಂಬಿಗೆ, ನಾಹಾಲು ನೀಡುವೆ. ತಾರೇ ತಂಬಿಗೆಯಾ'' ಅಂತ ಹಾಡು ಹೇಳೋದು ಒಂದು ಬಾಕಿ! ಬರ್ತಾ ಬರ್ತಾ ಈ ಸಹವಾಸದಿಂದಾಗಿ, ನನ್ನ ಮನಸ್ಸಿನಲ್ಲಿ ಎಮ್ಮೆಗಳ ಅಪೂರ್ವ ಗುಣಲಕ್ಷಣಗಳೆಲ್ಲಾ ಅರ್ಥವಾಯಿತು. ಮೊದಲನೆಯದಾಗಿ – ಅವುಗಳ ರೂಪ, ಬಣ್ಣ, ಅದೇನು ಕಟ್ಟುಮಸ್ತು ದೇಹ. ಅದೂ ವೆಜಿಟೇರಿಯನ್ನುಗಳಾಗಿದ್ದುಕೊಂಡು! ಅದೇನು ಬಣ್ಣ! ನೀರಿನಲ್ಲಿ ಮಿಂದು ಹೊರಕ್ಕೆ ಎದ್ದರೆ ಆ ಬಿಸಿಲಿನಲ್ಲಿ ಅವುಗಳ ಅಚ್ಚು ಕಪ್ಪು ಬಣ್ಣ ಹೇಗೆ ಹೊಳೀತಿತ್ತು ಅಂತೀರಿ! ಸ್ವಲ್ಪ ನನ್ನ ಬಣ್ಣಾನೂ ಅದೇ ತರಹ ಇದ್ದಿದ್ದರಿಂದ ನಾನೂ ಅವುಗಳೊಡನೆ ಬಾಂಧವ್ಯ ಬೆಳೆಸಿಕೋಳ್ಳೋದು ಕಷ್ಟವೇನೂ ಆಗಲಿಲ್ಲ. ನಾನು ಅವುಗಳ ಒಂದು ಫ್ಯಾಮಿಲಿ ಮೆಂಬರ್ ಆದೆ! ಇನ್ನು ಅವುಗಳ ಶಾಂತಿ ಸ್ವರೂಪ. ಅತ್ತಲಾಗಿ ಹಸನ್ಮುಖಿಯೂ ಅಲ್ಲ ಉಗ್ರ ಮೂರ್ತಿಯೂ ಅಲ್ಲ! ಯಾವಾಗಲೂ ನ್ಯೂಟ್ರಲ್ ಮನೋಭಾವಾನೇ! ನೀವು ಅದಕ್ಕೆ ಕಲ್ಲು ಹೊಡೆಯಿರಿ ಅಥವಾ ಅವುಗಳ ತಲೆ ಹಣೆ ಮೇಲೆ ನಾಲ್ಕು ಕಾಗೆಗಳು ಕೂತ್ಕೊಂಡು ಕುಕ್ಕಲಿ ಕೋಪ ಅನ್ನೋದೇ ಬರೋಲ್ಲ. ಮ್ಯಾಕ್ಸಿಮಂ ಉದ್ವೇಗ ಅಂದರೆ, ಎರಡು ಕಿವಿಗಳನ್ನೂ ರಪ್ ಅಂತ ಬಡೆಯುತ್ತವೆ ಅಷ್ಟೇ. ಅವು ಪರಿಸರವಾದಿಗಳೂ ಕೂಡ. ಸ್ನಾನಕ್ಕೆ ಕಾವೇರಿ ನೀರೇ ಬೇಕು, ಕುಡಿಯೋಕ್ಕೆ ಮಿನರಲ್ವಾಟರ್ ಬೇಕು ಅಂತ ಹಂಬಲಿಸೋ ಪ್ರಾಣಿಗಳಲ್ಲ. ಅವಕ್ಕೆ ಕೊಚ್ಚೆ ನೀರು ಅಂದರೇನೇ ಪಂಚಪ್ರಾಣ!

ಬಾಯಿಯಲ್ಲಿ ಒಂದಿಷ್ಟು ಹುಲ್ಲು ಇಟ್ಕೊಂಡು ಜಗಿಯುತ್ತಾ – ನಾವು ಹೊಗೇ ಸೊಪ್ಪು ಜಗಿಯೊಲ್ವೇ, ಹಾಗೆ – ಎಲ್ಲಾದರೂ ಕುಕ್ಕರು ಬಡೆದರೆ, ಅವಕ್ಕೆ ಬಿಸಿಲು ಮಳೆ ಅಂತ ಯಾವ ಲೆಕ್ಕಾನೂ ಇಲ್ಲ. ಕೆಲವು ಟ್ರಾಫಿಕ್ ಪೋಲೀಸಿನವರು, ತಮ್ಮಲ್ಲಿನ ಸ್ಟಾಫ್ ಕಮ್ಮಿ ಅಂತ, ಅವನ್ನ ಬೇಕಂತಲೇ, ರೋಡ್ ಮಧ್ಯ ಕೂರಿಸಿ, ಟ್ರಾಫಿಕ್ ಕಂಟ್ರೋಲ್ ಮಾಡೋದು ನೀವು ನೋಡಿಲ್ಲವೇ? ಎಂಥಾ ಹೆವಿ ಗಾಡಿಗಳಾದರೂ ಸರಿ, ಬ್ರೇಕ್ ಹೊಡೆದೇ ಮುಂದೆ

ಹೋಗಬೇಕು! ಇಷ್ಟಾದರೂ ನಮಗೊಂದು ಪರ್ಮನೆಂಟ್ ಕೆಲಸಾನ ಪೋಲೀಸ್ ಇಲಾಖೆಯಲ್ಲಿ ಕೊಡಿಸಿ ಅಂತಲೋ ನಮಗೆ ಯೂನಿಫಾರ್ಮ್ ಕೊಡಿ ಅಂತ ಎಮ್ಮೆಗಳು ಡಿಮ್ಯಾಂಡ್ ಮಾಡಿಲ್ಲ. ನಿಸ್ವಾರ್ಥವಾಗಿ, ಹೀಗೇ ಜನಸೇವೆ ಮಾಡುತ್ತಾ ಬಂದಿವೆ.

ನನ್ನನ್ನು ಯಾವಾಗಲೂ ಕಾಡ್ತಾ ಇರೋ ಒಂದು ಪ್ರಶ್ನೆ ಅಂದರೆ, ಎಮ್ಮೆಗೆ ಯಾಕೆ ಇದುವರೆವಿಗೂ ನೋಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿಲ್ಲಾ ಅಂತ. ಅದಕ್ಕಿಂತ ಬೇರೊಂದು ಶಾಂತಿ ಸ್ವರೂಪ ಇನ್ನೆಲ್ಲಾದರೂ ಇದ್ಯೆ, ನೀವೇ ಹೇಳಿ ಸ್ವಲ್ಪ ಓವರ್ ವೈಟ್ ಆಗಿ ಕಂಡುಬಂದರೂ, ಎಮ್ಮೆಗೆ ಬಿ.ಪಿ. ಇಲ್ಲ, ಶುಗರ್ ಇಲ್ಲ! ಡಯಟ್ ಅನ್ನೋ ಪದವೇ ಅದರ ಹತ್ತಿರ ಸುಳಿಯೋಲ್ಲ. ಆಸೆ/ಆಕಾಂಕ್ಷೆ ಇಟ್ಕೊಂಡು ಬಿ.ಪಿ. ಶುಗರ್ ಅನ್ನೋಕ್ಕೆ ಅವೇನು ಐ.ಟಿ.ಬಿ.ಟಿ.ಗಳೇ. ನಿಜ ಹೇಳಬೇಕು ಅಂದರೆ, ನನಗೆ ತಿಳಿದಿರೋ ಒಬ್ಬ ಪ್ರಾಣಿ ಡಾಕ್ಟರ ಪ್ರಕಾರ, ಎಮ್ಮೆಯ ಬಿ.ಪಿ. ಲೆವೆಲ್ ಎಷ್ಟಿದೆ ಅಂತ ಯಾರಿಗೂ ಸರಿಯಾಗಿ ಗೊತ್ತೇ ಇಲ್ಲವಂತೆ! ಯಾಕೆ...? ಅಂತ ಕೇಳಿದೆ. ಅದರ ದೇಹದ ಮೇಲೆ ಎಲ್ಲಿ ಬಿ.ಪಿ. ಪಟ್ಟಿ ಕಟ್ಟಿದ್ರೂ. ರೀಡಿಂಗೇ ಸಿಗಲ್ವಂತೆ! ಮತ್ತೆ ಕೆಲವು ಸಂಶೋಧಕರು ಬಹಳ ಕಷ್ಟಪಟ್ಟು ಎಮ್ಮೆ ಚಟುವಟಿಕೆ ಭಾಗಗಳಾದ ಬಾಲ ಮತ್ತು ಕಿವಿಗಳಿಗೆ ಹೇಗೋ ಪಟ್ಟಿ ಕಟ್ಟಿ ಬಿ.ಪಿ. ನೋಡಿದಾಗ ಅವರಿಗೆ ಕಂಡಿದ್ದು: 15/10!! ಇಂತಹ ಬಿ.ಪಿ. ಇದ್ದರೆ, ಎಮ್ಮೆ ಹಿಮಾಲಯದಲ್ಲಿ ದೀರ್ಘ ತಪಸ್ಸಿನಲ್ಲಿರೋ ಒಬ್ಬ ಋಷಿಯ ಸಮಾನ ಅಂತ ಹೇಳಬಹುದಲ್ಲವೆ?

ಇಂದಿನ ಆತಂಕ ಯುಗದಲ್ಲಿ ನಮಗೆ ಶಾಂತಿ ದೊರಕಬೇಕು ಅಂದರೆ, ಕತ್ತೆ ಮತ್ತು ಎಮ್ಮೆಗಳಿಂದ ಕಲಿಯೋದು ಬಹಳ ಇದೆ! ಅದಕ್ಕೇ ನನಗೆ ಅವಾಗಾವಾಗ ಬರೋ ಚಿಂತೆ ಅಂದರೆ, ನಾನೂ ಕತ್ತೆಯ ಹಾಗೋ ಎಮ್ಮೆಯ ಹಾಗೋ ಹುಟ್ಟಿದ್ದರೆ ಎಷ್ಟು ಚೆನ್ನಾಗಿರ್ತಿತ್ತು ಅಂತ. ಬಿಡಿ, ನನ್ನ ಪೀಳಿಗೆಯವರಿಗೂ ನನ್ನ ಕೆಳಗಿನ ಪೀಳಿಗೆಯವರಿಗೂ ಇದು ಸಾಧ್ಯವಿಲ್ಲ. ಯಾಕೆ ಅಂದರೆ ನಾವೆಲ್ಲಾ ಆಗಲೇ ಮನುಷ್ಯರಾಗಿ ಹುಟ್ಟಾಗಿದೆ. ಆದರೆ, ಮುಂದಿನ ಪೀಳಿಗೆಯ ಮಕ್ಕಳು – ಅಂದರೆ ನಮ್ಮ ಮರಿ–ಮಕ್ಕಳು ಮನಸ್ಸು ಮಾಡಿದರೆ ಎಮ್ಮೆಗಳಾಗಿಯೋ, ಕತ್ತೆಗಳಾಗಿಯೋ ಹುಟ್ಟಿ ಆನಂದವಾದ ಜೀವನವನ್ನು ಅನುಭವಿಸಬಹುದು. ಹ್ಯಾಗೆ ಅಂತೀರಾ? ಆ ಕಾಲಕ್ಕೆ ಡಿ.ಎನ್.ಎ.ನ ಬೇಕಾದ ಹಾಗೆ ಬದಲಾಯಿಸೋ ಟೆಕ್ನಿಕ್ ಎಲ್ಲಾ ನರ್ಸಿಂಗ್ ಹೋಮ್‌ಗಳಲ್ಲೂ ಇರುತ್ತೆ!

★

---

## ಸ್ವಗತ

**ನಿವೃತ್ತಿಯಾದವನ ಸ್ವಗತ:** ನಿದ್ದೆಯಿಂದ ಎದ್ದ ಮೇಲೆ ಆಫೀಸಿಗೆ ಹೋಗಬೇಕಾಗಿಲ್ಲ ಎಂದು ಖುಷಿಯಾಗುತ್ತದೆ. ಆದುದರಿಂದ ಪ್ರತಿದಿನ ಮೂರ್‍ನಾಲ್ಕು ಬಾರಿ ಹಾಗೆ ಮಾಡುತ್ತೇನೆ.

# ಸುಬ್ರಾಮುಗೆ ಸಿಂಪಥಿ......

**- ಎಚ್. ಗೋಪಾಲಕೃಷ್ಣ**

**ಮೊ**ನ್ನೆ ನಮ್ಮ ಘನ ಸರ್ಕಾರ ಬಸ್ಸಿನ ದರಗಳನ್ನು ಕಡಿಮೆ ಮಾಡಿತಲ್ಲಾ ಅವತ್ತಿನ ಮರುದಿನವೇ ನನ್ನ ಗೆಳೆಯ ಸುಬ್ರಾಮು ಸಿಕ್ಕಿದ್ದು. ಸುಬ್ರಾಮು ವಿಷಯ ನಿಮಗೆ ನಾನು ಈವರೆಗೆ ಹೇಳಿದ್ದೀನೋ ಇಲ್ಲವೋ ನನಗೆ ನೆನಪಿಲ್ಲ. ಅವನ ಸಂಗತಿ ಸ್ವಲ್ಪ ನಿಮಗೆ ಹೇಳಿ ಆಮೇಲೆ ಮುಂದಿನ ಪ್ಯಾರಾಕ್ಕೆ ಹೋಗಲೇ? ಸುಬ್ರಾಮು ನಾನೂ ಒಂದೇ ಕಡೆ ಜೀವ ತೇಯ್ದೋರು – ಸುಮಾರು ನಲವತ್ತು ವರ್ಷ ಒಂದೇ ಕಡೆ ಸಂಬಳ ಎಣಿಸುತ್ತಾ ಇದ್ದೆವು – ಅದರಿಂದ ನನಗೂ ಅವನಿಗೂ ಒಂದು ರೀತಿಯ ವಾಂಛಲ್ಯ, ಪ್ರೀತಿ, ವಿಶ್ವಾಸ.. ಹೀಗೆ ಏನೇನೋ.. ಈ ನಂಟಿನಿಂದ ಆತ ಅವಾಗವಾಗ ನನಗೆ ಸಿಕ್ತಾನೆ, ತನ್ನ ಕಷ್ಟ ಕಾರ್ಪಣ್ಯ ಸುಖ (ಸುಖವೆಲ್ಲಿರುತ್ತೆ ಬಿಡಿ – ಕಾರ್ಖಾನೇಲಿ ದುಡಿದವರಿಗೆ) ದುಃಖ ಇವನ್ನೆಲ್ಲಾ ತೋಡಿಕೊಳ್ಳಲು ನನ್ನ ಬಳಿ ಬರುತ್ತಾನೆ. ಕೆಲವು ಸಲ ಅವನ ಮನಸ್ಸು ಹಗುರ ಮಾಡಿಕೊಂಡು ಹೋಗುತ್ತಾನೆ. ಕೆಲವು ಸಲ ಇಬ್ಬರ ಮನಸ್ಸೂ ಭಾರವಾಗಿ ಅವನು ಆಕಡೆ ಹೋದರೆ ನಾನು ಈ ಕಡೆ ಹೋಗುತ್ತೇನೆ.. ಈ ಗೆಳೆಯನ ಒಂದು ಲಾಜಿಕ್ಕು ಅಂದರೆ ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತರಾಗಿರೋರು ಆದಷ್ಟು ಬೇಗ ಸಾಯಬೇಕು ಅಂತ! ಇದಕ್ಕೆ ಅವನು ಕೊಡುವ ಕಾರಣ ರಿಟೈರು ಆದಾಗ ಅವರಿಗೆ ಅದೆಷ್ಟೋ ಕಾಸು ಬಂದಿರುತ್ತೆ, ಆಮೇಲೆ ಒಂದೆರೆಡುವರ್ಷದಲ್ಲೇ ಆ ಹಣ ಯಾತಕ್ಕೂ ಸಾಲದು ಅಂತ ಗೊತ್ತಾಗುತ್ತೆ – ಆದರೆ ಅವರ ನಂಟರು ಬಂಧುಗಳು ಈತ ರಿಟೈರಾದಾಗ ದುಡ್ಡು ತುಂಬಾ ಬಂತು ಅಂತ ಇವನ ಮಿಕ್ಕ ಅವಶ್ಯಕತೆಗಳ ಕಡೆಗೆ ಗಮನ ಕೊಡೋಲ್ಲ. ಅಲ್ಲದೆ ಇವನ ಹತ್ತಿರ ಕಾಸಿದೆ ಅಂತ ಯಾರ್ಯಾರನ್ನೋ – ಬೇಕು ಬೇಡಾದವರು ಎಲ್ಲರನ್ನೂ ಛೂ ಬಿಡ್ತಾರೆ – ಕಾಸು ಇಸ್ಕೊಳ್ಳೋಕ್ಕೆ....... ಪಾಪ ಇವನ ಸ್ಥಿತಿ ಹೇಗಾಗಬೇಕು? ಅದಕ್ಕೆ ಒಳ್ಳೇ ಸಲ್ಯೂಷನ್ನು ಅಂದರೆ ಬೇಗ ಹರೋಹರಾ ಅಂದುಬಿಡೋದು..... ಇವನ ಈ ಲಾಜಿಕ್ಕನ್ನು ಒಪ್ಪುವ ಹಲವಾರು ಸ್ನೇಹಿತರು ಅವನಿಗೆ ಇದ್ದಾರೆ ಮತ್ತು ಮತ್ತೊಂದು ಹೇಳಲೇಬೇಕಾದ ಸಂಗತಿ ಅಂದರೆ ಇವನ ಸಾಮಾಜಿಕ ಕಾಳಜಿ. ಯಾವ ವಿಷಯವನ್ನೇ ತೆಗೆದುಕೊಳ್ಳಿ ಇವನು ಅದನ್ನು ನೋಡುವ ರೀತಿಯೇ ಬೇರೆ – ನಮ್ಮ ನಿಮ್ಮ ಹಾಗಲ್ಲ......!

ಸುಬ್ರಾಮು ಒಂದು ರೀತಿಯಲ್ಲಿ ಬೇಸರದಿಂದ ಇದ್ದ – ಸ್ಟೇಜಿನ ಮೇಲೆ ನಾಲ್ಕು ಘಂಟೆ ಕೂತಿದ್ದರೂ ಮಾತನಾಡಲು ಅವಕಾಶ ಸಿಕ್ಕಿರದ ಹಾಸ್ಯ ಭಾಷಣಕಾರನ ಮುಖದ ಹಾಗಿತ್ತು ಅವನ ಮುಖ.

ಯಾಕೆ? ಏನಾಯಿತು......? ಅಂತ ಮಾತು ಶುರು ಹಚ್ಚಿದೆ.

ಸರ್ಕಾರ ಹೀಗಾ ಮಾಡೋದೂ....? ಅಂದ.

ಏನಾಯಿತು ಸುಬ್ರಾಮು? ಅಂತ ಆತಂಕ ಮತ್ತು ವ್ಯಾಕುಲತೆ ಬೆರೆಸಿದ ದನಿಯಲ್ಲಿ ಕೇಳಿದೆ.

ಆತ ಎರಡು ಸಲ ನಿಟ್ಟುಸಿರು ಬಿಟ್ಟ. ಆತ ಸುಧಾರಿಸಲಿ ಎಂದು ಕಾದೆ. ಎರಡು ಮೂರು ನಿಮಿಷ ಸುಧಾರಿಸಿಕೊಂಡು ಆತ ಮಾತು ಶುರು ಮಾಡಿದ..........

ಎರಡು ವರ್ಷ ಹಿಂದೆ ನಾನು ರಿಟೈರು ಆದೆನಲ್ಲಾ.....

ತಲೆಯಾಡಿಸಿದೆ.ಅವನು ರಿಟೈರು ಆಗಿದ್ದು ಗೊತ್ತು ಅವತ್ತು ಅವನ ಮನೆಗೆ ಹೋಗಿ ಉಪ್ಪಿಟ್ಟು ಕೇಸರಿಭಾತು ತಿಂದು, ಬಾದಾಮಿ ಹಾಲು ಕುಡಿದು ಅವನ ಹೆಂಡತಿ ಮಕ್ಕಳಿಗೆ ಥ್ಯಾಂಕ್ಸು ಹೇಳಿ ಆತನ ಹೆಂಡತಿಗೆ ನಿಮ್ಮ ಗಂಡನ್ನ ನಿಮಗೆ ಒಪ್ಪಿಸಿದ್ದೀವಿ ಜೋಪಾನ ಅಂತ ಹೇಳಿ ಬಂದಿದ್ದೆವು. ಅದು ಇನ್ನೂ ನನಗೆ ನೆನಪಿದೆ.

ರಿಟೈರಾದಮೇಲೆ ವಾರಕ್ಕೆ ಎರಡು ಮೂರು ಸಲ ನನ್ನ ಮಗಳ ಮನೇಗೆ ಹೋಗಿ ಬರ್ತಿದ್ದೆ ಗೊತ್ತಾ?

ಅದೇನು ಗೊತ್ತಾ ಅಂತ ಕೇಳ್ತೀ? ಈಗಲೂ ಹೋಗಿ ಬರ್ತೀಯಾ ಅಲ್ವೇ...?

ಹೋಗಿ ಬರ್ತೀನಪ್ಪಾ.. ಸಮಸ್ಯೆ ಅದಲ್ಲಾ...

ಮತ್ತೇನೋ ಹೊಸಾದು? ಹೊಸಾ ಸಮಸ್ಯೆ ಯಾವುದನ್ನ ಈ ವಯಸ್ಸಿನಲ್ಲಿ ಸೃಷ್ಟಿಸಿಕೊಂಡು ಬಿಟ್ಟಿದ್ದಾನಾ ಅಂತ ಆತಂಕವಾಯಿತು.

ಸಮಸ್ಯೆ ಏನೂ ಅಂದರೆ, ಅವಾಗ ನಾನು ಬಸ್ಸಿಗೆ ಐದು ರೂಪಾಯಿ ಕೊಡ್ತಾ ಇದ್ದೆ – ಸೀನಿಯರ್ ಸಿಟಿಜನ್ ಲೆಕ್ಕದಲ್ಲಿ, ಒಂದು ಟ್ರಿಪ್‌ಗೆ ಎರಡು ರೂಪಾಯಿ ಮಿಗುತ್ತೆ ಅಂತ ಖುಷಿಯಾಗೋದು – ಮಿಕ್ಕವರಿಗೆ ಏಳು ರೂಪಾಯಿದ್ದಾಗ ನನಗೆ ಐದು ಅಂದರೆ ಖುಷಿಯಾಗಲ್ವೇ....

ತಲೆಯಾಡಿಸಿದೆ. ನನಗೂ ಈ ಅನುಭವ ತೀರಾ ಈಚೆಗೆ ಆಗಿದೆ. ಮೊನ್ನೆ ಮಂತ್ರಾಲಯಕ್ಕೆ ಹೋದಾಗ ನನ್ನವಳಿಗೆ ಮುನ್ನೂರ ಎಂಬತ್ಮೂರು ತಗೊಂಡ್ರೆ ನನಗೆ ಮುನ್ನೂರ ಒಂದು ತಗೊಂಡ ಟಿಕೇಟ್‌ಗೆ – ಸೀನಿಯರು ಅಂತ. ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಸರ್ಕಾರ ನನ್ನ ವಯಸ್ಸನ್ನ ಮೆಚ್ಚಿ ಕೊಟ್ಟ ಉಡುಗೊರೆ ಇದು ಅಂತ ನನಗೆ ಅನಿಸಿತ್ತು ಮತ್ತು ಇದನ್ನ ಸುಮಾರು ಸಾವಿರ ಜನರ ಹತ್ತಿರ ಹೇಳಿಕೊಂಡಿದ್ದೆ. ವಾಚಕರ ವಾಣಿಗೆ ಪತ್ರವನ್ನೂ ಬರೆದಿದ್ದೆ – ಆದರೆ ಅದು ಪಬ್ಲಿಷ್ ಆಗಲಿಲ್ಲ! ಅವನ ಕಡೆ ಕಿವಿ ಕೊಟ್ಟೆ.

ಅವಾಗ ಐದು ರೂಪಾಯಿ ಇತ್ತಲ್ಲಾ ಪ್ರಪಂಚದಲ್ಲಿ ಪೆಟ್ರೋಲು ಬೆಲೆ ಏರಿತು ಅಂತ ನಮ್ಮ ಸರ್ಕಾರವೂ ಬಸ್ಸಿನ ರೇಟು ಏರಿಸಿಕೊಂಡು ಬಂತಲ್ಲಾ ರೇಟು ಏರಿ ಏರಿ ಈಗ ನನ್ನ ಮಗಳ ಮನೆಗೆ ಹೋಗಬೇಕೂಂದರೆ ಹೋಗ್ತಾ ಹನ್ನೊಂದು ಬರ್ತಾ ಹನ್ನೊಂದು ಇಪ್ಪತ್ತೆರಡು ಇರಬೇಕು ಕೈನಲ್ಲಿ....... ನಗಬೇಡ ಅಂದ.

ಸರಿ ಸರಿ ನಗಲಿಲ್ಲ ಅಂತ ಕೆಮ್ಮಿ ನಗು ತಡಕೊಂಡೆ.

ಮೊನ್ನೆ ರೇಟು ಕಡಿಮೆ ಮಾಡಿದ್ರಲ್ಲಾ ನಮ್ಮ ಸಾರಿಗೆ ಮಂತ್ರಿ ಅವಾಗ ಏನಾಗಿದೆ ಗೊತ್ತಾ?

ಏನು.......... ಅಂದೆ. ಸೀರಿಯಸ್ಸಾಗಿ ಅವನು ಕಥೆ ಹೇಳುತ್ತಿರಬೇಕಾದರೆ ನಾವೂ ಹಾಗೇ ಇರಬೇಕು ತಾನೇ...!

ಬಸ್ಸಿನ ರೇಟು ಕಡಿಮೆಯಾಗಿದೆ ಅಂತ ಬಸ್ಸು ಹತ್ತಿ ಚಾಮುಂಡೇಶ್ವರಿ ಅಂತ ಹತ್ತು ಕೊಟ್ಟರೆ ಕಂಡಕ್ಟರ್ರಿಣಿ ಇನ್ನೊಂದು ರೂಪಾಯಿ ಕೊಡಿ ತಾತಾ ಅಂತ ಕಿಸ ಕಿಸ ನಗ್ತಾಳಲ್ಲಾ......?

ಯಾಕಮ್ಮಾ ಇವತ್ತಿಂದ ದರ ಇಳಿಸಿದೀವಿ ಅಂತ ನಿಮ್ಮ ಮಂತ್ರಿಗಳು ಹೇಳಿದರಲ್ಲಾ ನಿನ್ನೆ ಸಂಜೆ ನ್ಯೂಸಿನಲ್ಲಿ? ಅಂದೆ.

ರೇಟು ಕಡಿಮೆ ಆಗಿದೆ ತಾತಾ ಮೊದಲನೇ ಸ್ಟೇಜಿಗೆ ಆರು ರೂಪಾಯಿಂದ ಐದಕ್ಕೆ ಅಂತ ಆ ಹುಡುಗಿ ಮತ್ತೆ ಮತ್ತೆ ನಗ್ತಾಳಲ್ಲಾ.....? ಇರಿಟೇಟು ಆಗುತ್ತೋ ಇಲ್ಲವೋ... ಪಕ್ಕಕ್ಕೆ ತಿರುಗಿ ಮತ್ತೊಮ್ಮೆ ನಗು ತಡೆದುಕೊಂಡು ಯೆಸ್ ಅಂದೆ.

ಸರ್ಕಾರ ಹೀಗಾ ಮಾಡೋದೂ..? ಇದು ಹಗಲು ಮೋಸ ಅಲ್ಲವಾ? ಹಗಲು ದರೋಡೇನೂ ಅಲ್ಲವಾ?

ಹೌದು ಸುಬ್ರಾಮು... ನೀನು ಹೇಳೋದು ಸರಿ... ಅಂದೆ.

ನನ್ನ ಬಂಧುಗಳಿಗೆ ಈ ವಿಷಯ ಹೇಳಿದರೆ ನಿನಗೇನು ಪೆನ್ಷನ್ನು ಬರುತ್ತೆ, ಪರವಾಗಿಲ್ಲ ಅನ್ತಾರೆ........ ನನ್ನ ಪೆನ್ಷನ್ನು ಎಷ್ಟು ಅಂತ ಹೇಳಿಕೊಳ್ಳೋದಿಕ್ಕೆ ನನಗೇ ನಾಚಿಕೆ...... ಯಾವ ಮುಖ ಇಟ್ಕೊಂಡು ನನಗೆ ಸಾವಿರದ ಇನ್ನೂರ ಹನ್ನೆರೆಡು ಪೆನ್ಷನ್ನು ಬರುತ್ತೆ ಅಂತ ಹೇಳಲಿ............?

ಪಾಪ ಅನ್ನಿಸಿತು. ಸರ್ಕಾರ ಹೀಗೆ ಮಾಡಬಾರದಾಗಿತ್ತು ಅಂತ ಅನಿಸಿತು. ಆದರೆ ಅದಕ್ಕೆ ಹೇಳೋರು ಯಾರು?

ಸುಬ್ರಾಮು ನಿನ್ನ ನೋವಿನಲ್ಲಿ ನಾನೂ ಸಮಭಾಗಿ..... ಅಂದೆ!

☆



# ಕೊನೆಯ ಮಾತು

**- ಸು. ವಿಜಯಲಕ್ಷ್ಮಿ**

**ಸೋ**ಮಿ ನಗರದಲ್ಲಿ ನಡೆಯಲಿರುವ ಆದರ್ಶ ದಂಪತಿಗಳ ಸ್ಪರ್ಧೆಯಲ್ಲಿ ಭಾಗವಹಿಸಲು ತೀರ್ಮಾನಿಸಿದಳು. ಸೋಮನಿಗೆ ಇಷ್ಟವಿಲ್ಲದಿದ್ದರೂ ಸೋಮಿಯ ಬಲವಂತಕ್ಕೆ ಒಪ್ಪಿಕೊಳ್ಳಲೇ ಬೇಕಾಯಿತು. ಒಪ್ಪಿಕೊಂಡ ಮೇಲೆ ನಮ್ಮ ಸೋಮಿ ಬಿಡುತ್ತಾಳೆಯೇ? ಸೋಮನಿಗೆ ಪ್ರತಿ ದಿನಾ ರಾತ್ರಿ ಊಟವಾಗಿ ಮಕ್ಕಳು ಮಲಗಿದ ಮೇಲೆ ಒಂದೆರೆಡು ಗಂಟೆ ಕ್ಲಾಸು ಮಾಡಲು ಪ್ರಾರಂಭಿಸಿದಳು.

ರೀ ಅಲ್ಲಿ ಏನು ಕೇಳುತ್ತಾರೆಂದರೆ ನಿಮ್ಮ ಮನೆಯವರಿಗೆ ಯಾವ ಸಿಹಿ ಇಷ್ಟ? ಯಾವ ಹೂ ಇಷ್ಟ? ಯಾವ ಬಣ್ಣ ಇಷ್ಟ? ನೀವಿಬ್ಬರೂ ಮದುವೆಯಾದ ಹೊಸದರಲ್ಲಿ ಹೋದ ಮೊದಲ ಸಿನಿಮಾ ಯಾವುದು? ನಿಮ್ಮ ಮನೆಯವರ ಹುಟ್ಟಿದ ಹಬ್ಬ ಯಾವತ್ತು? ನಿಮಗೆ ಯಾವ ಸಿನಿಮಾ ಇಷ್ಟ? ಯಾವ ಹಾಡು ಇಷ್ಟ? ಹೀಗೆ ಎಲ್ಲಾ ಪ್ರಶ್ನೆಗಳನ್ನೂ ಕೇಳುತ್ತಾರೆ. ನಾವಿಬ್ಬರೂ ಕೊಡುವ ಉತ್ತರ ಒಂದೇ ರೀತಿ ಇರಬೇಕು ಎಂದು ಸುಮಾರು ಪ್ರಶ್ನೆಗಳನ್ನು ಕೇಳಿ, ಅದಕ್ಕೆ ಉತ್ತರಗಳನ್ನೂ ಸೋಮನಿಗೆ ಹೇಳಿಕೊಟ್ಟಳು. ಸೋಮನಿಗೆ ಇದ್ಯಾವುದೂ ತಲೆಗೆ ಹೋಗಲಿಲ್ಲ.

ಏ ಸೋಮಿ, ಇದೆಲ್ಲಾ ನಮಗ್ಯಾಕೆ? ಸ್ಪರ್ಧೆಗೆ ಹೋಗದಿದ್ದರೆ ಏನಾಯಿತೇ? ಈಗ ಮದುವೆಯಾಗಿ ಹನ್ನೆರೆಡು ವರ್ಷವಾದರೂ ನಾವು ಜಗಳವಾಡಿದ್ದೀವೇನೇ? ಹಾಗೆ ಆದರ್ಶ ದಂಪತಿಗಳಾಗಿಲ್ಲವಾ? ಎಂದ ಸೋಮ.

ರೀ, ಪಕ್ಕದ ಮನೆ ಮೀನಾಕ್ಷಿ ಅವಳ ಗಂಡ ಆದರ್ಶ ದಂಪತಿ ಸ್ಪರ್ಧೆಗೆ ಹೋಗುತ್ತಾರಂತೆ. ನಾವೂ ಹೋಗೋಣ ರೀ. ನಮಗೇ ಬಹುಮಾನ ಬರಬೇಕು ಎಂದು ಹೇಳಿದಾಗ, ಸೋಮಿ ಬಡಪೆಟ್ಟಿಗೆ ಬಿಡುವವಳಲ್ಲವೆಂದು ಸೋಮ ನಿರ್ಧರಿಸಿದ.

ನೋಡು ಅವರು ಅದೇನು ಪ್ರಶ್ನೆ ಕೇಳಬಹುದೋ ಆ ಪ್ರಶ್ನೆಗಳನ್ನೂ ಮತ್ತು ಉತ್ತರಗಳನ್ನೂ ನೀನು ಬರೆದಿಡು. ನಾನು ಆಫೀಸಿನಲ್ಲಿ ಪುರುಸೊತ್ತು ಇರುವಾಗ ಓದಿ ಕಲಿತುಕೊಳ್ಳುತ್ತೇನೆ ಎಂದು ಸೋಮ ಹೇಳಿದ.

ದೂರದರ್ಶನದಲ್ಲಿ ಬರುತ್ತಿದ್ದ ಆದರ್ಶ ದಂಪತಿ ಸ್ಪರ್ಧೆ ನೋಡಿ ನೋಡಿ ನಮ್ಮ ಸೋಮಿ ಆಗ ಆ ವಿಷಯದಲ್ಲಿ ಪರಿಣಿತಳಾಗಿದ್ದಳು. ಅವಳು ಉತ್ತರ ಸಹಿತವಾಗಿ ಒಂದು ಪ್ರಶ್ನೆ ಪತ್ರಿಕೆಯನ್ನು ತಯಾರಿಸಿ, ಸೋಮನಿಗೆ ಕೊಟ್ಟಳು. ಪ್ರತಿದಿನ ರಾತ್ರಿ ಊಟವಾಗಿ ಮಕ್ಕಳು ಮಲಗಿದ ಮೇಲೆ ಇವರಿಬ್ಬರ ಪ್ರಶ್ನೋತ್ತರ ಕಾರ್ಯಕ್ರಮ ನಡೆಯುತ್ತಿತ್ತು. ಹಾಗೂ ಹೀಗೂ ಸೋಮ ಸೋಮಿಯ ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳುವ ಸ್ಥಿತಿಗೆ ಬಂದನು.

ಸೋಮಿಯ ಕನಸಿನ ಆದರ್ಶ ದಂಪತಿ ಸ್ಪರ್ಧೆ ದಿನ ಬಂದೇ ಬಿಟ್ಟಿತು. ಸೋಮಿ ಮದುಮಗಳಂತೆ ಅಲಂಕರಿಸಿಕೊಂಡು ಹೊರಟಳು. ಸೋಮನೂ ಸೋಮಿಯ ಆದೇಶದ

ಮೇರೆಗೆ ಮೊನ್ನೆ ದೀಪಾವಳಿಗೆ ಹೊಲಿಸಿದ ಹೊಸ ಬಟ್ಟೆಯನ್ನು ತೊಟ್ಟು ಹೊರಟನು. ಇಬ್ಬರೂ ಹೋಗಿ ಆದರ್ಶ ದಂಪತಿ ಸ್ಪರ್ಧೆಗೆ ಹೆಸರು ನೋಂದಾಯಿಸಿದರು. ಸೋಮಿ ಆ ಕಡೆ ನೋಡಿದರೆ ಆಗಲೇ ಪಕ್ಕದ ಮನೆ ಮೀನಾಕ್ಷಿ ಗಂಡನೊಡನೆ ಬಂದಾಗಿತ್ತು. ಸೋಮಿ ಈ ಸ್ಪರ್ಧೆಯಲ್ಲಿ ಬಹುಮಾನ ತಮಗೇ ಬರಬೇಕೆಂದೂ, ಒಂದು ವೇಳೆ ತನಗೆ ಬರದಿದ್ದರೂ ಮೀನಾಕ್ಷಿ ದಂಪತಿಗಳಿಗೆ ಬರಲೇಬಾರದೆಂದು ಹಲವು ದೇವರಿಗೆ ಹರಕೆ ಹೊತ್ತಳು.

ಕಾರ್ಯಕ್ರಮ ಪ್ರಾರಂಭವಾಯಿತು. ಮೀನಾಕ್ಷಿ ದಂಪತಿಗಳು ಮೊದಲ ಸುತ್ತಿನಲ್ಲೇ ಸ್ಪರ್ಧೆಯಿಂದ ಹೊರ ನಡೆದಾಗ ಸೋಮಿಗೆ ಹಾಲು ಕುಡಿದಷ್ಟು ಸಂತೋಷವಾಯಿತು. ಮನೆ ದೇವರಾದ ತಿರುಪತಿ ತಿಮ್ಮಪ್ಪ ನಿಗೆ ಮನದಲ್ಲಿಯೇ ವಂದಿಸಿದಳು. ಅವಳ ಆತ್ಮ ವಿಶ್ವಾಸ ಇನ್ನೂ ಹೆಚ್ಚಾಯಿತು. ಅಂತೂ ಸೋಮ, ಸೋಮಿ ದಂಪತಿಗಳು ಕೊನೆಯ ಸುತ್ತಿಗೆ ಬಂದರು. ಅಂತಿಮ ಸುತ್ತಿನಲ್ಲಿ ಸೋಮ, ಸೋಮಿಯರೇ ಮೊದಲಿಗರಾಗಿ ವಿಜೇತರಾದರು. ಸೋಮಿಯನ್ನು ಹಿಡಿಯುವವರೇ ಇಲ್ಲ. ದೂರದರ್ಶನಕ್ಕೆ ಫೋಸ್ ಕೊಟ್ಟದ್ದೇ ಕೊಟ್ಟಿದ್ದು. ಸೋಮ ಮಾಮೂಲಿನಂತೆ ಇದ್ದನು.

ಕಾರ್ಯಕ್ರಮದ ಆಯೋಜಕರು ಸೋಮ ಸೋಮಿಯರಿಗೆ ಆದರ್ಶ ದಂಪತಿ ಎಂಬ ಬಿರುದನ್ನಿತ್ತು ಉಡುಗೊರೆಯನ್ನಿತ್ತು ಸನ್ಮಾನಿಸಿದರು. ಸನ್ಮಾನದ ನಂತರ ಸೋಮಿಯನ್ನು ದೂರದರ್ಶನದವರು ಪ್ರಶ್ನಿಸಿದರು. ನೋಡಿ ಆದರ್ಶ ದಂಪತಿಗಳು ನೀವು. ನಿಮ್ಮ ಸಂಸಾರದಲ್ಲಿ ಜಗಳವಾದಾಗ ಯಾರು ಸೋಲುತ್ತೀರಿ ಅಥವಾ ಯಾರು ಸೋತು ಗೆಲ್ಲುತ್ತೀರಿ? ಎಂದರು.

ಸೋಮಿ ನೋಡಿ ನಾವು ಜಗಳವಾಡುವುದೇ ಇಲ್ಲ. ನಮ್ಮ ಮದುವೆಯಾಗಿ ಹನ್ನೆರೆಡು ವರ್ಷಗಳಾದರೂ ಒಂದು ದಿನವೂ ನಾವು ಜಗಳವಾಡಿಲ್ಲ. ಬೇಕಾದರೆ ನಮ್ಮ ಯಜಮಾನರನ್ನೇ ಕೇಳಿ? ಎಂದಳು.

ಆಗ ದೂರದರ್ಶನದವರು ನೋಡಿ ನೀವು ಜಗಳವಾಡುವುದೇ ಇಲ್ಲವೆಂದು ನಿಮ್ಮ ಪತ್ನಿ ಹೇಳುತ್ತಾರೆ. ಇದು ಹೇಗೆ ಸಾಧ್ಯ? ಎಂದು ಸೋಮನ ಬಾಯಿಗೆ ಮೈಕ್ ಹಿಡಿದು ಪ್ರಶ್ನಿಸಿದರು.

ನೋಡಿ ನಮ್ಮ ಮನೆಯಲ್ಲಿ ನನ್ನದೇ ಕೊನೆಯ ಮಾತು ಎಂದ ಸೋಮ ದರ್ಪದಿಂದ.

ಮಾಧ್ಯಮದವರೂ, ವೀಕ್ಷಕರೂ ಹುಬ್ಬೇರಿಸಿ, ಸೋಮನತ್ತ ನೋಡಿದರು.

ತುಂಬಾ ಸಂತೋಷ ಸೋಮಶೇಖರ್‌ರವರೇ! ನಿಮ್ಮ ಮಾತು ನಮಗೆ ತುಂಬಾ ಆಶ್ಚರ್ಯ ಎನಿಸುತ್ತದೆ ಎಂದರು ಸಂದರ್ಶಕರು.

ಇದರಲ್ಲಿ ಆಶ್ಚರ್ಯ ಏನು ಬಂತು ಸಾರ್? ನನ್ನವಳು ಹೇಳಿದ್ದಕ್ಕೆಲ್ಲಾ ನಾನು ಹೂಂ ಎನ್ನುತ್ತೇನೆ. ಹಾಗೆಂದ ಮೇಲೆ ಮುಂದಿನ ಮಾತು ಎಲ್ಲಿದೆ? ಜಗಳಕ್ಕೆ ಅವಕಾಶವೆಲ್ಲಿದೆ? ಎಂದು ಸೋಮ ಹೇಳಿದಾಗ ಬೇಸ್ತು ಬೀಳುವ ಸರದಿ ಮಾಧ್ಯಮದವರಾಗಿತ್ತು.

☆

# Advertisement

**Advertisement**

# ಗೊರೂರರ ತಿಳಿಹಾಸ್ಯದ ನೂರೆಂಟು ಮುಖಗಳು

**- ಸುಕೇಶವ**

**ಬ**ರವಣಿಗೆಯ ವಿಚಾರದಲ್ಲಿ ಒಂದು ಮಾತಿದೆ. ಬರೆಯುವ ಮುನ್ನ ಚೆನ್ನಾಗಿ ಓದಬೇಕು, ಹಾಗೆ ಓದಿದ ನಂತರ ಬರೆದರೆ ಚೆನ್ನಾಗಿ ಓದುವಂತೆ ಬರೆಯಬೇಕು ಅಂತ. ಗೊರೂರರ ವಿಚಾರದಲ್ಲಿ ಇದು ನಿಜವಾದ ಮಾತು. ಅವರ ಬಾಲ್ಯಾವಸ್ಥೆಯಲ್ಲಿ ಅವರಿಗಿದ್ದ ಬಡತನ, ಮುಂದೆ ಬದುಕಿನಲ್ಲಿ ಕಂಡ ನೂರಾರು ಏಳುಬೀಳುಗಳು, ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ ಅನುಭವಗಳು ಇವುಗಳೆಲ್ಲದರ ಜೊತೆಗೆ ಅವರೊಂದಿಗೆ ಇದ್ದು ಅವರನ್ನು ಸಾಹಿತ್ಯ ಲೋಕದಲ್ಲಿ ಶ್ರೀಮಂತರನ್ನಾಗಿ ಮಾಡಿದ್ದು ಅವರ ಊರಿನ ಅನುಭವಗಳು. ಅವುಗಳನ್ನು ಮೆಲುಕು ಹಾಕುವುದೇ ಒಂದು ಸೊಗಸು. **ಗರುಡಗಂಬದ ದಾಸಯ್ಯ, ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು, ಬೈಲಹಳ್ಳಿಯ ಸರ್ವೆ, ಹೇಮಾವತಿಯ ತೀರದಲ್ಲಿ** ಮುಂತಾದುವುಗಳನ್ನು ನಾವು ಓದುತ್ತಾ ಕೂತರೆ ಭಾರತದ ಗ್ರಾಮ ವಾಸ್ತವ್ಯದ ಪರಿಚಯವಾಗುತ್ತದೆ. ಜೊತೆಜೊತೆಗೆ ಆಗಿನ ಜೀವನ ಕ್ರಮ, ಜನರ ಮನೋಭಾವ, ಅವರ ನಡವಳಿಕೆ, ನ್ಯಾಯಪರತೆ ಹೀಗೆ ವ್ಯಕ್ತಿಗಳ ನಾನಾ ಮುಖಗಳನ್ನು ಕಾಣಬಹುದು.

ನಾನು ಅವರನ್ನು ಭೇಟಿ ಮಾಡಿದ್ದು ಒಂದು ವಿಚಿತ್ರ ಸನ್ನಿವೇಶದಲ್ಲಿ. ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನಕ್ಕೆ ನಾನು ಒಬ್ಬ ವಿಶೇಷ ಆಹ್ವಾನಿತ. ಒಂದು ಮಧ್ಯಾಹ್ನ ನಾನು ಬೆಂಗಳೂರು ಬಸ್ ಸ್ಟಾಂಡಿಗೆ ಹೋಗಿ ಮೈಸೂರಿಗೆ ಹೋಗೋ ಪ್ಲಾಟ್‌ಫಾರಂನಲ್ಲಿ ನಿಂತೆ. ಸ್ವಲ್ಪ ಹೊತ್ತಿಗೆ ಒಬ್ಬರು ಖಾದೀ ಕಚ್ಚೆ ಪಂಚೆ ಮತ್ತು ಜುಬ್ಬ ತೊಟ್ಟು ಕೈನಲ್ಲಿ ಒಂದು ಬಂಡಲ್ ಪುಸ್ತಕಗಳನ್ನು ಇಟ್ಟುಕೊಂಡು ಬಂದು ನಿಂತರು. ಅವರನ್ನು ನೋಡಿದೊಡನೇ ಅದೇನೋ ಒಂದು ರೀತಿ ಆಕರ್ಷಣೆ ಬಂತು. ಅವರ ಕೆಲವು ಪುಸ್ತಕಗಳನ್ನು ನಾನು ಓದಿದ್ದೆನಾದರೂ, ಆ ಪುಸ್ತಕಗಳಲ್ಲಿ ಲೇಖಕರ ಭಾವಚಿತ್ರ ಇಲ್ಲದೇ ಇದ್ದುದರಿಂದ ಅವರೇ ಇವರು ಅಂತ ಖಚಿತವಾಗುತ್ತಿರಲಿಲ್ಲ. ಆದರೂ ಅವರನ್ನು ನೋಡಿದೊಡನೇ ಇವರೇ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇರಬೇಕು ಅಂತ ಮಾತಾಡಿಸಿದೆ. ನನ್ನ ಊಹೆ ನಿಜವಾಯಿತು. ಅವರು ಬಾಯ್ ತುಂಬಿ ಮಾತಾಡಿದರು. ಅಚ್ಚರಿ ಅಂದರೆ ಅವತ್ತು ಅಲ್ಲಿ ಬಸ್ ಸ್ಟಾಂಡಿನಲ್ಲಿ ಇನ್ಯಾರಿಗೂ ಇವರು ಗೊರೂರು ಅಂತ ಗೊತ್ತಾಗಲಿಲ್ಲ, ಬಸ್ಸಿನಲ್ಲೂ ಯಾರೂ ಅವರನ್ನು ಗುರುತು ಹಿಡಿಯಲಿಲ್ಲ.

ಲೇಖಕರಿಗೆ ಅವರವರ ಅನುಭವಗಳು ಸಾಕಷ್ಟು ಮುದ ಕೊಡುತ್ತವೆ. ಅವುಗಳನ್ನು ಲೇಖನಕ್ಕಿಳಿಸಿ ಓದುಗರಿಗೆ ಕೊಡೋ ಜವಾಬ್ದಾರಿ ಲೇಖಕನ ಮೇಲಿರುತ್ತವೆ. ಇದನ್ನು ಗೊರೂರು ಮಾಡಿದರು ನಾನು ಮಾಡಲಿಲ್ಲ, ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ ಓದಿ.

ಎಮ್ಮೆ ಕರು ಹಾಕಿದ ಪ್ರಸಂಗ ಲೇಖನದಲ್ಲಿ ಅವರ ಹಳ್ಳಿಯಲ್ಲಿ ಒಂದು ಎಮ್ಮೆ ಇರುತ್ತೆ. ಅದರ ವಿಶೇಷ ಏನಪ್ಪಾ ಅಂದರೆ ಅದು ನಿಂತುಕೊಂಡು ಕರುವನ್ನು ದೊಪ್ಪಂತ ನೆಲಕ್ಕೆ

ಹಾಕುತ್ತದೆ. ಆ ಎಳೆಗರುಗೆ ತುಂಬಾ ಪೆಟ್ಟಾಗಬಹುದು ಅಂತ ಮನೆಯವರಿಗೆ ಆತಂಕ. ಅದಕ್ಕೇ ಮುಂದಿನ ಸಾರಿ ಅದು ಕರು ಹಾಕುವಾಗ ನಾನು ಇರುತ್ತೇನೆ ಅಂತ ಗೊರೂರರು ಹೇಳಿದ್ದರು. ಅಂತೆಯೇ ಎಮ್ಮೆ ಗಬ್ಬ ಆಗಿ ಇನ್ನೇನು ಕರು ಹಾಕಬೇಕು ಅನ್ನುವ ದಿವಸ ಗೊರೂರರು ಒಬ್ಬ ಆಳಿನ ಜೊತೆ ಕೊಟ್ಟಿಗೆಯಲ್ಲಿ ಇದ್ದರು. ಎಮ್ಮೆ ಕರು ಹಾಕುವ ಪ್ರಸಂಗ ಬಂದಾಗ ಆಳಿನ ಜೊತೆ ಗೊರೂರರು ಒಂದು ಗೋಣೀಚೀಲ ಹಿಡಿದು ಎಮ್ಮೆಯ ಹಿಂದುಗಡೆ ನಿಂತರು. ಅದು ಯಾವ ಸಮಯದಲ್ಲಿ ಕರು ಹಾಕಿದರೂ ಅದು ಗೋಣೀಚೀಲದ ಮೇಲೆ ಬೀಳಬೇಕು. ಎಮ್ಮೆ ಇವರಿಬ್ಬರ ಕಡೆ ನೋಡಿತು ನಂತರ ಇನ್ನೊಂದು ಕಡೆ ತಿರುಗಿತು. ಗೊರೂರರೂ ಆ ಕಡೆಗೆ ತಿರುಗಿದರು. ಎಮ್ಮೆ ಮತ್ತೆ ತಿರುಗಿತು. ಗೊರೂರರೂ ಆ ಕಡೆಗೇ ತಿರುಗಿ ನಿಂತರು. ಹೀಗೆ ಗೊರೂರರಿಗೆ ಎಮ್ಮೆಯ ಹಿಂದೆ ಹಿಂದೆ ಗೋಣೀಚೀಲ ಹಿಡಿದು ನಿಲ್ಲೋದೇ ಆಯಿತು. ಒಂದು ಸನ್ನಿವೇಶದಲ್ಲಿ ಗೊರೂರರು ಸ್ವಲ್ಪ ಗಮನ ಬೇರೆಡೆ ತಿರುಗಿಸಿದ್ದಾಗ ಎಮ್ಮೆ ದೊಪ್ಪಂತ ಕರೂನ ನೆಲದ ಮೇಲೆ ಎಸೆದಾಗಿತ್ತು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ನಡೆದ ಈ ಘಟನೆಯಿಂದ ಗೊರೂರರು ಎಲಾ ಎಮ್ಮೆಯೇ ನೀನು ನನಗಿಂತ ಬುದ್ದಿವಂತ ಅಂತ ತೋರಿಸಿಬಿಟ್ಟೆಯಲ್ಲ ಅಂತ ಸ್ವಾರಸ್ಯವಾಗಿ ಬರೆಯುತ್ತಾರೆ.

ಗೊರೂರರ ಲೇಖನಗಳ ವೈಶಿಷ್ಟ್ಯ ಅಂದರೆ ಅವರು ಎಲ್ಲಿಯೂ ಹಾಸ್ಯ ಲೇಪನ ಮಾಡೋಕೆ ಹೋಗಿಲ್ಲ. ಬೇಡದ ಉಪಮೆಗಳನ್ನಾಗಲೀ, ಪ್ರಾಸಗಳನ್ನಾಗಲೀ ಬಳಸೋ ಕಸರತ್ತು ಮಾಡಿಲ್ಲ. ದೊಡ್ಡ ದೊಡ್ಡ ಶಬ್ದಗಳನ್ನು ಪ್ರಯೋಗ ಮಾಡಿಲ್ಲ. ಅನ್ಯಥಾ ವಿಷಯಗಳನ್ನು ಬಳಸಿಲ್ಲ. ಘಟನೆಗಳನ್ನು ತಾವು ಹೇಗೆ ನೋಡಿದರೋ ಹಾಗೇ ಪ್ರಸ್ತುತ ಪಡಿಸಿದ್ದಾರೆ. ಹೀಗಾಗಿ ಅವು ನಮ್ಮ ನಿಮ್ಮ ನಡೆಯುತ್ತಿರವಂಥ ಘಟನೆಗಳೇ ಅನಿಸಿಬಿಡುತ್ತದೆ. ಒಬ್ಬ ಲೇಖಕ ಎಲ್ಲಿ ಹೋದರೂ ಅನುಭವದ ಮೂಟೆಯನ್ನು ಹೊತ್ತುಕೊಂಡು ಬರಬೇಕು ಎನ್ನುವುದು ಗೊರೂರಿಂದ ನಾವು ಕಲಿಯಬೇಕಾದ ವಿಷಯ. ಅವರು ಅಮೆರಿಕಾಕ್ಕೆ ಹೋದಾಗಿನ ಅನುಭವಗಳನ್ನು ಅಮೆರಿಕಾದಲ್ಲಿ ಗೊರೂರು ಅಂತ ಬರೆದಿದ್ದಾರೆ. (ಇಲ್ಲಿ ನನಗೂ ಅವರಿಗೂ ಮತ್ತೊಂದು ಸ್ವಾಮ್ಯವಿದೆ ಅವರು ಅಮೆರಿಕಾ ಪ್ರವಾಸ ಮಾಡಿ ಬಂದಾದ ಮೇಲೆ ಅಮೆರಿಕಾದಲ್ಲಿ ಗೊರೂರು ಬರೆದರೆ ನಾನು ಜಪಾನ್ ಪ್ರವಾಸ ಮಾಡಿ ಬಂದು ಜಪಾನಿನಲ್ಲಿ ಬೇಲೂರು ಬರೆದೆ)

ಕನ್ನಡ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಗೊರೂರು ಸ್ವಾತಂತ್ರ ಚಳುವಳಿಯ ಸಿಹಿ ಕಹಿಗಳನ್ನೂ ಉಂಡವರು. ಗೊರೂರರಿಗೆ 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. 1982ರಲ್ಲಿ ಸಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇದರ ಜೊತೆಗೆ ಅವರ ಅಮೆರಿಕಾದಲ್ಲಿ ಗೊರೂರು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ಗೊರೂರರು ಬರೆದ ಬರವಣಿಗೆ ತುಂಬಾ ಅಪರೂಪದ್ದು ಮತ್ತು ತುಂಬಾ ಅನುರೂಪವಾದದ್ದು. ಈಗ ಗೊರೂರು ನಮ್ಮಲ್ಲಿಲ್ಲ ಅವರು ಕಂಡಂಥ ಸಮಾಜವೂ ನಮ್ಮಲ್ಲಿಲ್ಲ, ಎಲ್ಲವೂ ಬದಲಾವಣೆಗೊಳ್ಳುತ್ತಿವೆ. ಆದರೆ ಗೊರೂರರಂಥ ಮಹನೀಯರನ್ನು ನೆನೆಸಿ ಮುನ್ನಡೆಯುವ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ.

☆

# ಕಡ್ಲೆಕಾಯಿ ಕಥೆ

**– ಬೇಲೂರು ರಾಮಮೂರ್ತಿ**

ಆ ಮುದುಕಿ ದಿನಾಗಲೂ ಪೇಟೆಯ ಅಂಗಡಿ ಬೀದಿ ಸಾಲಿನ ತುದಿಯಲ್ಲಿ ಕೂತು ಕಡ್ಲೆಕಾಯಿ ಮಾರ್ತಾಳೆ. ಬೆಳಗ್ಗೆ ಹತ್ತು ಗಂಟೆಗೆ ಬಂದರೆ ಸಂಜೆ ಆರು ಗಂಟೆಯವರೆಗೂ ಇರ್ತಾಳೆ. ಊಟ, ತಿಂಡಿ ಎಲ್ಲ ಅಲ್ಲೇ. ಅವಳ ಗಂಡ ಸುಮಾರು ಒಂದು ಗಂಟೆಯ ಹೊತ್ತಿಗೆ ಅವಳಿಗೆ ಊಟ ತಗೊಂಡು ಬರ್ತಾನೆ. ಗಂಡ ವ್ಯಾಪಾರ ಮಾಡಿದರೆ ಹೆಂಡತಿ ಊಟ ಮಾಡಿ ತುಸು ವಿಶ್ರಾಂತಿ ಮಾಡುತ್ತಾಳೆ.

ಬರೋ ಗಿರಾಕಿಗಳು ಎಷ್ಟಮ್ಮಾ ಕಡ್ಲೇಕಾಯಿ ಅಂತ ಒಂದೆರಡು ಕಡ್ಲೆಕಾಯಿ ತಿಂದು ಐದು ರೂಪಾಯಿಗೋ ಹತ್ತು ರೂಪಾಯಿಗೋ ಕಡ್ಲೆಕಾಯಿ ಕೊಂಡು ಹೋಗ್ತಾರೆಯೇ ಹೊರತು ಅವಳನ್ನು ಇನ್ನೇನೂ ಮಾತಾಡಿಸೋಲ್ಲ. ಅವಳಿಗೆ ಅದು ಬೇಕಾಗೂ ಇಲ್ಲ.

ಆದರೆ ಒಂದು ದಿನ ಒಬ್ಬ ಗಿರಾಕಿ ಬಂದು ಎಷ್ಟಮ್ಮಾ ಕಡ್ಲೆಕಾಯಿ ಅಂತ ಕೇಳುತ್ತಾ ರಾಶಿಗೆ ಕೈ ಹಾಕಿ ಒಂದೆರಡು ಕಡ್ಲೆಕಾಯಿ ತಗೊಂಡು ತಿಂದ. ನಂತರ ಇದು ಯಾವ ಊರಿನ ಕಡ್ಲೆಕಾಯಿ ಅಂತ ಇನ್ನೊಂದೆರಡು ತಿಂದ. ಎಷ್ಟು ವರ್ಷದಿಂದ ಕಡ್ಲೆಕಾಯಿ ವ್ಯಾಪಾರ ಮಾಡ್ತಾ ಇದೀಯ ಅಂತ ಕೇಳಿ ಮತ್ತೊಂದೆರಡು ತಿಂದ. ಕೊಡೋದು ಹೇಳು, ಹಸಿ ಕಡ್ಲೆಕಾಯಿ ಇಲ್ವಾ ಅಂತ ಇನ್ನೊಂದೆರಡು ತಿಂದ.

ಕಡೆಗೂ ಸರಿ ಎರಡು ಸೇರು ಕಡ್ಲೆಕಾಯಿ ಹಾಕು ಅಂದ. ಅವಳು ಕಡ್ಲೆಕಾಯಿ ಕೊಟ್ಟು ದುಡ್ಡು ತಗೊಂಡ್ಲು. ಆಗ ಅವನು ಇನ್ನಷ್ಟು ಕಡ್ಲೆಕಾಯಿ ತಗೊಂಡು ತಿಂದ. ಅವಳು ಕೊಟ್ಟ ಚಿಲ್ಲರೆ ನೋಟು ನೋಡಿಕೊಳ್ಳುತ್ತಾ ಏನಮ್ಮಾ ಕಡ್ಲೆಕಾಯಿ ಮಾರ್ತಾನೇ ಸೈಟು ಮನೆ ಎಲ್ಲಾ ಮಾಡಿಕೊಂಡಿದಿಯಾ ಅಂತ ಮತ್ತೊಂದೆರಡು ಕಡ್ಲೆಕಾಯಿ ತಗೊಂಡು ತಿನ್ನುತ್ತಾ ತಮಾಷೆ ಮಾಡಿದ. ಅವಳು ಅವನ ಕಡೆಯೇ ನೋಡುತ್ತಾ ಮಾಡ್ಕೊಬಹುದಾಗಿತ್ತು ಏನು ಮಾಡೋದು ಇಲ್ಲಿ ಬರೋ ಗಿರಾಕಿಗಳು ವ್ಯಾಪಾರ ಮಾಡೋ ಹತ್ತರಷ್ಟು ಕಡ್ಲೆಕಾಯಿನ ಪುಗಸಟ್ಟೆಯಾಗಿ ತಿನ್ಕೊಂಡು ಹೋಗ್ತಾರೆ. ಅವರು ತಿಂದ ಪುಗಸಟ್ಟೆ ಕಡ್ಲೆಕಾಯಿಯೂ ವ್ಯಾಪಾರ ಆಗಿ ನನಗೆ ದುಡ್ಡು ಬಂದಿದ್ರೆ ಸೈಟೋ ಮನೇನೋ ಮಾಡ್ಕೊಬಹುದಾಗಿತ್ತು ಅಂದಳು. ಅವನು ಹೊರಟಾಗ ರಾಶಿಯಿಂದ ಇನ್ನಷ್ಟು ಕಡ್ಲೆಕಾಯಿ ತಗೊಂಡೋನು ಅದ್ಯಾಕೋ ಬೇಡ ಅನಿಸಿ ವಾಪಸ್ ರಾಶಿಗೇ ಹಾಕಿಬಿಟ್ಟು ಹೊರಟ.

☆

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ಸಂತೋಷ = ಈಡೇರಿದ ಆಸೆಗಳು ÷ ಬಯಸಿದ ಆಸೆಗಳು.
- ಪನ್ ಮಾಡುವವರಿಗೆ ಏನು ಪನಿಷ್‌ಮೆಂಟ್?
- ಕೃತಜ್ಞತೆಯನ್ನು ಪದಗಳ ಮೂಲಕ ಹೇಳುವುದರಲ್ಲಿ ಯಾರೂ ಇನ್ನೂ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ.
- ಫ್ಯಾಷನ್ ಈಸ್ ವಾಟ್ ಯು ಅಡಾಪ್ಟ್ ವೆನ್ ಯು ಡೋಂಟ್ ನೊ ಹು ಯು ಆರ್.
- ಪ್ರಕೃತಿಯೊಂದಿಗಿನ ತೀವ್ರ ಒಡನಾಟ ಕಳೆದುಕೊಂಡಾಗ ದೇವಾಲಯ, ಮಸೀದಿ, ಚರ್ಚ್ ಮುಖ್ಯವಾಗತೊಡಗುತ್ತದೆ.
- ನಾನು ಕಣ್ಣಿಲ್ಲದೆ ಬದುಕಿದ್ದೇನೆ ನಿಜ. ಆದರೆ ಕನಸುಗಳಿಲ್ಲದೆ ಯಾವತ್ತೂ ಬದುಕಿಲ್ಲ.
- ದೇವರಿದ್ದಾನೆ ಎಂಬ ಪರಿಕಲ್ಪನೆಯೇ ಜಗತ್ತಿನ ಅತಿ ದೊಡ್ಡ ಮೂಢನಂಬಿಕೆ.
- ಇಫ್ ದಿ ಲಯನ್ ಬಿಫ್ರೆಂಡ್ಸ್ ದಿ ಪ್ರೆ ವಾಟ್ ವಿಲ್ ಇಟ್ ಈಟ್?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಮಂತ್ರಿಗಳ ಗುಣ ಹೇಗೇ ಇರಲಿ ಅವರ ಡ್ರೆಸ್ ಮಾತ್ರ ಶುಭ್ರವಾಗಿರುತ್ತದೆ.
- ನೀರನೀಸುವವನ ದೇಹ ಬಳಲುವುದಲ್ಲದೆ ನೀರು ಬಳಲುವುದೆ?
- ನಾನು ತಪ್ಪುಗಳಿಂದ ಸಾಕಷ್ಟು ಪಾಠ ಕಲಿತಿದ್ದೇನೆ. ಆದುದರಿಂದಲೇ ಇನ್ನಷ್ಟು ತಪ್ಪುಗಳನ್ನು ಮಾಡಬೇಕೆಂದಿದ್ದೇನೆ.
- ದಿ ಫಾಸ್ಟೆಸ್ಟ್ ವೆ ಟು ಗೊ ಸಂವೇರ್ ಈಸ್ ಟು ಗೊ.
- ಒಂದು ಬಾಣ ನಿಮಗೆ ನಾಟಿದ್ದರೆ ಅದು ಹೇಗೆ ಬಂತು, ಯಾರಿಂದ ಬಂತು ಎಂದು ವಾದಿಸುತ್ತಾ ಕೂರಬೇಡಿ. ಮೊದಲು ಅದನ್ನು ಕಿತ್ತು ಹಾಕಿ.
- ಕುವೆಂಪು, ಗಾಂಧಿ, ಅಂಬೇಡ್ಕರ್ ಅವರ ಭಾವಚಿತ್ರ ಹಾಕಿಕೊಳ್ಳುವ ಅನೇಕರು ಅವರನ್ನು ಓದುವುದಿಲ್ಲವೇಕೆ?
- ಹ್ಯಾಂಗ್ ಫ್ರಂ ಎ ಬೊನ್ಸಾಯ್ ಟ್ರೀ?
- ಜನ ನಿಮ್ಮನ್ನು ಹೇಗೆ ನೋಡುತ್ತಾರೆ ಎಂಬುದು ಅವರ ಕರ್ಮ. ಅದಕ್ಕೆ ಹೇಗೆ ನೀವು ಪ್ರತಿಕ್ರಿಯಿಸುತ್ತೀರಿ ಎಂಬುದು ನಿಮ್ಮ ಕರ್ಮ.

☆

# ಮೂರು ತಲೆಮಾರಿನ ಮನೋಧರ್ಮ

**- ಡಾ. ರುದ್ರಯ್ಯ ವಿ.**

**ಕ**ಲ್ಲೇಶಿ ಮಗ ಗುಂಡನನ್ನು ಶಾಲೆಗೆ ಅಟ್ಟಿ ಬರಲು ನಡೆದು ಹೋಗುತ್ತಿದ್ದ. ಹೀಗೆ ಚಲಿಸುತ್ತಿರುವಾಗ, ರಸ್ತೆ ಬದಿಯ ಒಂದು ಮನೆಬಾಗಿಲೊಳಗೆ ನಿಂತಿದ್ದ ಗೂಳಿ ಸ್ವರೂಪದ ಅಪರೂಪದ ಆಸಾಮಿ ಗುಂಡನ ಗಮನ ಸೆಳೆದ! ಗುಂಡ ಗರಬಡಿದವರಂತೆ ಗಕ್ಕನೆ ನಿಂತ!

''ಲೇ ಗುಂಡ ದೆವ್ವ ನಿಂತಂಗ ನೀ ಯಾಕ ನಿಂತ ಬಿಟ್ಟಿ'' ಕಲ್ಲೇಶಿ ಮಗನನ್ನು ಪ್ರಶ್ನಿಸಿದ.

''ಅಪ್ಪಾ! ರಸ್ತೆ ಬದಿ ಮನಿ ಬಾಗಿಲೊಳಗ ಹೊನಗೆನಂತ ಒಂದು ಪ್ರಾಣಿ ನಿಂತೈತಿ ನೋಡು. ಆ ಆಸಾಮಿ ಗಾತ್ರ ಬಾಗಿಲು ಹಿಡಿಸದಾಟು. ಹೊಟ್ಟೆ ದೊಡ್ಡನಗಾರಿ. ನಂಗೊಂದು ಪ್ರಶ್ನೆ ಕಾಡಾಕ ಹತ್ತೈತಿ. ಆದೇನಪ್ಪಾಂದ್ರ, ಆಸಾಮಿ ಸತ್ತ... ಅವ್ನ ಹೆಣನ ಮನಿ ಹೊರಗ ಹ್ಯಾಂಗಪ್ಪಾ ತರೋದು?'' ಎಂದು ಪ್ರಶ್ನೆ ಎಸೆದು, ಗುಂಡ ಕಿಸಕ್ಕನೆ ನಕ್ಕ. ತುಂಟ ಗುಂಡನಿಗೆ ಮಾತು ಜಾಸ್ತಿ. ಕಂಡದ್ದೆನ್ನೆಲ್ಲಾ ಅದು ಏನು ಇದು ಏನು ಅಂತ ಕೇಳೋ ಚಟ.

''ಅದ್ಯಾವ ದೊಡ್ಡ ವಿಷಯ ಬಿಡ್ಲೆ, ಗ್ವಾಡಿ ಒಡ್ದು, ಬಾಗಿಲು ಉಡಾಯಿಸಿ, ಹೆಣನ ಸುಸೂತ್ರವಾಗಿ ಹೊರಕ್ಕೆ ತರ್‍ತಾರ. ಅಲ್ಲ ಅವ್ನೇನು ನಮ್ ನೆಂಟನಾ, ಸ್ನೇಹಿತನಾ? ಅಲ್ಲವೇ ಅಲ್ಲ. ಅಂದ ಮ್ಯಾಲೆ ಅವ್ನ ಉಸಾಬರಿ ನಿಂಗ್ಯಾಕ್ಬೇಕು? ಶಾಲೆಗೆ ಹೊತ್ತಾಗೇತಿ, ಸಾಕು ನಡಿ'' ಕಲ್ಲೇಶಿ ಗುಂಡನಿಗೆ ಗದರಿದ.

ಕಲ್ಲೇಶಿಯ ವ್ಯಂಗ್ಯ ಮಾತು ಮಾದರಿ ಆಸಾಮಿಗೆ ನಾಟಿತು. ಅವನಿಗೆ ಏಕದಂ ಸಿಟ್ಟು ತಾರಕಕ್ಕೇರಿತು. ಬಿ.ಪಿ. ಜಂಪ್ ಹೊಡೆಯಿತು!

''ಇವನ್ನಾವನಲೆ ಬೇವರ್ಸಿ ತಂದು? ಅಲ್ಲ ತನ್ನನ್ನು ಏನೆಂದು ಎಣಿಸ್ಯಾನ? ಅವ್ನಿಗೆ ಏಟೊಂದು ಸಿಟ್ಟು? ಅದನ್ ಸದೆ ಬಡಿಲೇಬೇಕು!'' ಮನೆಯ ಯಜಮಾನ ಸೇವಕರನ್ನು ಕರೆದು,

''ಲೇ ದಂಡಪಿಂಡಗಳೇ ಜಿಂಕೆ ಹಾಂಗ ಜಿಕೋಂತ ಹೋಗಿ, ಏಳರಾಗ ಹುಟ್ಟಿರುವ ಎಡಬಿಡಂಗಿಯನ್ನು ಮತ್ತು ಚೊಟ್ಯಾನ ಹೆಡಮುರಿಗೆ ಬಿಗಿದು, ದರದರ ಎಳ್ಕೊಂಡು ಬಂದು ಮನಿ ಮುಂದಿನ ಮರಕ್ಕೆ ಕಟ್ಟು ಹಾಕಿ ಬಿಡಿ'' ಎಂದು ಗಡಸು ಧ್ವನಿಯಲ್ಲಿ ಅಬ್ಬರಿಸಿದ.

ಒಡೆಯನ ಮಾತೆಂದ್ರೆ ಸೇವಕರಿಗೆ ವೇದವಾಕ್ಯ!

ಅವರು ಒಂದೇ ಉಸಿರಿನಲ್ಲಿ ಓಡಿ ಹೋಗಿ, ತಂದೆ - ಮಗನನ್ನು ಎಳೆದುಕೊಂಡು ಬಂದು ಮರಕ್ಕೆ ಕಟ್ಟಿಹಾಕಿದರು.

★★★

ಇತ್ತ ಮನೆಯಲ್ಲಿದ್ದ ಮೈಲಾರಿಗೆ ಮಗ ಕಲ್ಲೇಶಿಯದೇ ಧ್ಯಾನ!

''ಕಲ್ಲೇಶಿ ಮನಿಗೆ ಈಗ ಬಂದಾನು ಆಗ ಬಂದಾನು ಅಂತ ದಾರಿ ಕಾದದ್ದೇ ಬಂತು

ಹೊರತು ಅವನೇನು ಬರಲಿಲ್ಲ. ಕಲ್ಲೇಶಿ ಯಾಕ ವಾಪಸು ಬರ್‍ಲಿಲ್ಲ? ಅವ್ನಿಗೇನ್ ಬಂದೇತಿ ಕೇಡು? ಏನಾದರು ಆಗಬಾರದ್ದು ಆಗಿರ್‍ಲೇಬೇಕು'' ಹೀಗೆ ಯೋಚಿಸಿ ಯೋಚಿಸಿ ಮೈಲಾರಿ ಮಂಡೆ ಬಿಸಿಯಾಯ್ತು. ಒಂದು ಥರಾ ಟೆನ್ಸನ್! ಹೀಗೇ ಕುಂತರೆ ತಲೆ ಚಿಟ್ಟು ಹಿಡಿದು ಹೋಗುತ್ತೆ. ಶಾಲೆಯ ಮಟ ಹೋಗಿ ನೋಡಿಕೊಂಡು ಬಂದ್ರ ಗೊಂದಲವೆಲ್ಲ ಜಳಜಳ.

ಮೈಲಾರಿ ದಿಗ್ಗನೆ ಮೇಲೆದ್ದು, ಶಾಲೆಯತ್ತ ಬಿರಬಿರನೆ ಹೆಜ್ಜೆ ಹಾಕಿದ. ಹೀಗೆ ನಡೆದು ಹೋಗುತ್ತಿರುವಾಗ, ಯಾವುದೋ ಆಳದಿಂದ ಕಲ್ಲೇಶಿಯ ಆರ್ತನಾದ ತೇಲಿ ಬಂತು! ಮೈಲಾರಿ ಎದೆ ಧಸಕ್ಕೆಂದಿತು! ಪಕ್ಕಕ್ಕೆ ಹೊರಳಿ ನೋಡಿದ. ಕಣ್ಣಳತೆಯಲ್ಲಿ ಭಯಾನಕ ಸೀನ್ ಕಂಡು ಕರಳು ಚುರುಕ್ಕೆಂದಿತು! ಮೈಲಾರಿ ಪಾತಾಳಕ್ಕೆ ಕುಸಿದ!

ಯಾರೋ ಕಿಡಿಗೇಡಿಗಳು ಕಲ್ಲೇಶಿ ಮತ್ತು ಗುಂಡನನ್ನು ಮರಕ್ಕೆ ಕಟ್ಟಿ ಹಾಕಿದ್ದರು. ವಾಟ್ ನಾನ್ ಸೆನ್ಸ್? ಎಂದು ಮೈಲಾರಿ ಅರಚಿದ. ಮರಕ್ಕೆ ಕಟ್ಟಿ ಹಾಕುವಂಥ ಅಪರಾಧವನ್ನು ಕಲ್ಲೇಶಿ ಅದೇನು ಮಾಡಿರುವನು? ಅದನ್ನು ಅವನ ಬಾಯಿಂದಲೇ ಕೇಳಬೇಕೆಂದು, ಮೈಲಾರಿ ಅವನ ಬಳಿ ಧಾವಿಸಿ ಹೋದ.

''ಅವಿವೇಕಿ ಕಲ್ಯಾ ನಿಂದು ಏನ್ಕಥೆ ಮಾರಾಯ? ಅದೇನ್ ಕಿತಾಪತಿ ಮಾಡೀಲೇ ಮುಟ್ಠಾಳ? ಯಾವ ಬೋಳಿಮಗ ನಿನ್ ಕಟ್ಟಿ ಹಾಕ್ಯಾನ? ಅವ್ನು ಸಿಕ್ರ... ಚರ್ಮ ಸುಲ್ದು ಕೈಯಾಗ ಕೊಡ್ತೀನಿ. ಅವ್ನಿಗೆ ಗತಿ, ಗತಿ ಕಾಣಸ್ತೀನಿ'' ಎಂದು ಮೈಲಾರಿ ಅಬ್ಬರಿಸಿದ.

''ಇದ್ರಾಗ ನಂದೇನು ತಪ್ಪಿಲ್ಲಪ್ಪಾ. ನಮ್ಮ ಪಾಡಿಗೆ ನಾವು ನಡೆದು ಹೋಗುತ್ತಿರುವಾಗ ಗುಂಡ ಒಂದು ಪ್ರಶ್ನೆ ಕೇಳಿದ. ನಾನು ಅದಕ್ಕೆ ಹಿಂಗಿಂಗ ಅಂತ ಸೂಕ್ತ ಉತ್ತರ ಕೊಟ್ಟಿದ್ದೇ ತಡ ಆಳುಗಳು ಓಡಿ ಬಂದು, ನಮನ್ ಎಳ್ಕೊಂಡು ಹೋಗಿ, ಮರಕ್ಕೆ ಕಟ್ಟಿಹಾಕ್ಯಾರ'' ಎಂದು ಕಲ್ಲೇಶಿ ಒಂದೇ ಉಸಿರಿನಲ್ಲಿ ವರದಿ ಒಪ್ಪಿಸಿದ.

''ಲೇ ಕಲ್ಲೇಶಿ ನೀನು ಹುಚ್ಚವ್ವ್ಯಾಲಿದಿ ಕಣೋ. ಅಲ್ಲ ಹೆಣ ಹೊರಗ ತರಾಕ ಬಾಗಿಲು, ಗ್ವಾಡಿ ಉಡಾಯಿಸ್ಬೇಕಾ? ಅದರ ಬದಲು, ಹೆಣದ ಮಚ್ಚಿಲೆ ಕೊಚ್ಚಿಹಾಕಿ, ಹೆಡಗ್ಯಾಗ ತುಂಬ್ಸಿ, ಸಲೀಸಾಗಿ ಹೊರಗ ತರಬೋದಪ್ಪಾ'' ಎಂದು ಮೈಲಾರಿ ಭೂಮಿ ಆಕಾಶ ಒಂದ ಮಾಡುವಂತೆ ಕಿರುಚಿದ.

ಮೈಲಾರಿಯ ಮೊನಚಿನ ಮಾತು ಒಂಟಿ ಸಲಗನ ಎದೆಗೆ ಇರಿದಂತಾಯಿತು. ಅವನು ಸೇವಕರನ್ನು ಕರೆದು, ''ಲೇ ಉಂಡಾಡಿಗಳೇ, ಆ ಕಟುಕನ ಅವರೊಟ್ಟಿಗೆ ಕಟ್ಟಿ ಹಾಕಿ ಬಿಡಿ ಸಾಯಲಿ'' ಎಂದು ಹುಕಂ ಕೊಟ್ಟ.

ಸೇವಕರು ಒಡೆಯನ ಹುಕಂನ್ನು ಚಾಚೂ ತಪ್ಪದೆ ಪಾಲಿಸಿದರು.

★★★

ಮನೆಯಲ್ಲಿದ್ದ ಮೈಲಾರಿ ತಂದೆ ಪರ್‍ಮೇಶಿಗೆ ಮಕ್ಕಳು ಮನೆಗೆ ವಾಪಾಸು ಆಗದಿರುವ ವಿಷಯ ಆತಂಕಕ್ಕೆ ಎಡೆ ಮಾಡಿತು.

''ಭಗವಂತಾ ಏನಪ್ಪಾ ನಿನ್ ಲೀಲೇ! ಶಾಲಿ ದಾರಿ ಹಿಡಿದ ಮೂರೂ ಮಕ್ಕಳು ಎಲ್ಲಿ ಹೋದರು...? ಮೊದ್ಲು ಕಲ್ಲೇಶಿ ಮತ್ತು ಗುಂಡ ಮಾಯವಾದ್ರು! ಈಗ ನೋಡಿದ್ರ ಮೈಲಾರಿ

ಕೂಡಾ ಮಟಾಮಾಯ! ಪ್ಲೀಸ್ ಶಿವನೇ! ಮಕ್ಕಳಿಗೆ ಏನೂ ತೊಂದ್ರೆ ಆಗ್ದಂತೆ ನೊಡ್ಕೊ. ಅವ್ರು ಜೋಪಾನವಾಗಿ ಮನಿಗೆ ವಾಪಾಸು ಬರೋಹಾಂಗ ಮಾಡು ಶಿವನೇ! ಅವ್ರು ಕಾಣಿಕೆಯಾಗಿರುವ ಮಸಲತ್ತಾದ್ರು ಏನು? ಏನೋ ಅನಾಹುತ ಆಗಿರ್ಬೇಕು!''

ಹೀಗೆ ಚಿಂತಿ ಮಾಡುತ್ತಾ ಕುಂತರೆ ತಲೆ ಬ್ಯಾನಿ ಬರೋದು ಗ್ಯಾರಂಟಿ. ಇಲ್ಲೇ ಕುಂತರೆ ಆಗೋದಲ್ಲ ಹೋಗೋದಲ್ಲ. ಶಾಲೆ ಮಟ ಹೋಗಿ ಬಂದ್ರ ಗೊಂದಲವೆಲ್ಲ ಜಳಜಳ. ಪರ್ಮೇಶಿ ಧಡಕ್ಕನೆ ಮೇಲೆದ್ದು ಶಾಲೆಯತ್ತ ಮುಖ ಮಾಡಿದ.

ಪರ್ಮೇಶಿಗೊಂದು ಅಚ್ಚರಿ ಕಾದಿತ್ತು! ರಸ್ತೆ ಮೇಲೆ ನಡೆದು ಹೋಗುತ್ತಿರುವಾಗ ಮನಕಲುಕುವ ಸೀನ್ ಅವನ ಕಣ್ಣಿಗೆ ರಾಚಿತು! ಮೂರೂ ಜನರನ್ನು ಹೆಡಮುರಿಗೆ ಬಿಗಿದು ಒಂದೇ ಮರಕ್ಕೆ ಕಟ್ಟಿ ಹಾಕಿದ್ದರು! ಅದನ್ನು ಕಂಡು ಪರ್ಮೇಶಿ ಜರ್ಜರಿತನಾದ! ಮರಕ್ಕೆ ಕಟ್ಟಿ ಹಾಕುವಂಥ ಅಪರಾಧ ಅವರೇನು ಎಸಗಿರಬಹುದು? ಕಾರಣ ಕಗ್ಗಂಟಾಯಿತು. ಅವರ ಬಾಯಿಂದಲೇ ಕೇಳಿದರಾಯಿತೆಂದು, ಪರ್ಮೇಶಿ ಅವರ ಬಳಿ ಧಾವಿಸಿ ಹೋದ.

''ಲೇ ಮೈಲಾರಿ ಏನಪ್ಪಾ ನಿನ್ ಕಥೆ? ನಿಮನ್ ಯಾಕ ಕಟ್ಟಿ ಹಾಕ್ಯಾರ? ಯಾವ ಬೋಳಿಮಗ ಕಟ್ಟಿಹಾಕ್ಯಾನ? ನೀವು ಎಸಗಿದ ಅಪರಾಧವಾದರು ಏನು?'' ಪರ್ಮೇಶಿ ಆರ್ಭಟಿಸಿದ.

''ದೇವರಾಣೆಗೂ ನಾನು ಯಾವ್ದೇ ಅಪರಾಧ ಎಸಗಿಲ್ಲಪ್ಪಾ ಗುಂಡನ ಪ್ರಶ್ನೆಗೆ ಕಲ್ಲೇಶಿ ಮತ್ತು ನಾನು ಹಿಂಗಿಂಗ ಅಂತ ವಿಭಿನ್ನ ಪರಿಹಾರ ಸೂಚಿಸಿದೆವು. ಅಷ್ಟಕ್ಕೇ ಎಲ್ಲಿಂದಲೋ ಬಂದ ಸೇವಕರು, ನಮನ್ ಹೆಡಮುರಿಗೆ ಬಿಗಿದು, ಮರಕ್ಕೆ ಕಟ್ಟಿಹಾಕಿರುವರು.'' ಮೈಲಾರಿ ನಡೆದ ಕಥೆಯನ್ನು ಕಣ್ಣಿಗೆ ಕಟ್ಟುವ ಹಾಗೆ ವಿವರಿಸಿದ.

''ಲೋ ಮೂರ್ಖಶಿಖಾಮಣಿಗಳೇ, ಹೆಣನ ಹೊರಗಡೆ ತರಾಕ ಮನಿಗ್ವಾಡಿ ಒಡಿಯೋದು, ಬಾಗಿಲು ಉಡಾಯಿಸುವುದು, ಮಚ್ಚಿಲೇ ಕೊಚ್ಚೋದು ಇವೆಲ್ಲಾ ಬೇಕಾ?''

''ಮತ್ತೆ ಹೆಣನ ಹ್ಯಾಂಗ ಹೊರಗಡೆ ತರ್ಬೇಕು?'' ಮೈಲಾರಿ ಪ್ರಶ್ನಿಸಿದ.

''ನಂಗೆ ಅನಿಸೋ ಮಟ್ಟಿಗೆ ಮನಿಗೆ ಸೀಮೆಎಣ್ಣೆ ಸುರಿದು, ಕಡ್ಡಿಗೀರಿ, ಬೆಂಕಿ ಇಟ್ರ ಮುಗಿತಾ ಕಥೆ! ಹೆಣನ ಹೊರಗ ತರೋದು, ಸುಡುಗಾಡಿಗೆ ಒಯ್ದು ಸುಡೋದು ಎಲ್ಲಾ ಕೆಲ್ಸ ಒಂದ ಸಲಕ್ಕೆ ಢಮಾರ್! ಏಕ್ ಮಾರ್ ದೋ ತುಕುಡಾ ಅಂತಾರಲ್ಲ ಹಾಗೆ'' ಎಂದು ಪರ್ಮೇಶಿ ಸೂರು ಹಾರುವಂತೆ ಕಿರುಚಿದ.

ಪರ್ಮೇಶಿ ಮಾತು ಮನೆಯೊಳಗೆ ನಿಂತಿದ್ದ ಆ ಮಾದರಿ ಪ್ರಾಣಿಗೆ ಕೇಳಿಸಿತು. ಅವನು ಕೆರಳಿ ಕೆಂಡಾಮಂಡಲವಾದ ರುದ್ರಾವತಾರ ತಾಳಿದ! ಸೇವಕರನ್ನು ಕರೆದು,

''ಇವನ್ಯಾವನಲೆ ಉಪದ್ವ್ಯಾಪಿ ತಂದು? ನನ್ನ ಮನಿಗೆ ಬೆಂಕಿ ಇಡಾವ! ಲೇ ಬೆಪ್ಪನನ್ಮಕ್ಕಳೇ ಆ ಬೊಗಳೋ ನಾಯಿನ್ ಮೂವಾರ ಕೂಡ ಕಟ್ಟ ಹಾಕಿ ಬಿಡಿ'' ಎಂದು ಆಜ್ಞಾಪಿಸಿದ. ಆಜ್ಞಾಧಾರಕರು ಧಣಿಯ ಆಜ್ಞೆಯನ್ನು ಪಾಲಿಸಿದರು.

☆

# ಕೊರವಂಜಿ ಪದಬಂಧ – 15

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

2. ಅಚ್ಚುಕಟ್ಟಾಗಿರುವಿಕೆಯನ್ನು ಹೀಗನ್ನಿ (5)
4. ಮರವೆಯಲ್ಲಿರುವ ಧಾನ್ಯದ ನುಚ್ಚು (2)
5. ಗಮ್ಮತ್ತು ಇಟ್ಟುಕೊಂಡು ತೋರಿದ ಬಿಂಕ (2)
6. ಪಣ ಒಡ್ಡಿ ಕೈಗೊಂಡ ಪ್ರಯಾಣ (3)
7. ಉತ್ತರವೇ ಇಲ್ಲದಿರುವುದು (4)
8. ಲೆಕ್ಕ ಮಾಡುವ ಯಂತ್ರ (5)
11. ಕಣದಲ್ಲಿರುವವ ಅತೀ ಬುದ್ಧಿವಂತ (4)
12. ಮನವನ್ನು ಕೊನೆಗಿಟ್ಟು ಮಾಡಿದ ನಿಗ್ರಹ (3)
13. ಮುನಿದರೂ ಸಂತೋಷವೇ (2)
14. ಭಿನ್ನರಾಶಿಯಲ್ಲಿರುವ ಗುಡ್ಡೆ (2)
15. ನವ ಯುವತಿ ಇಲ್ಲಿದ್ದಾಳೆ (5)

**ಮೇಲಿಂದ ಕೆಳಕ್ಕೆ**

1. ಉಪಕಾರಕ್ಕೆ ಪ್ರತಿಯಾಗಿ ಮಾಡುವ ಉಪಕಾರ (5)
2. ನಾವೆಲ್ಲರೂ ಹತ್ತಿರುವ ದೋಣಿ (2)
3. ನರ ನೋಡಿರುವ ಶಹರು (3)
4. ಯುದ್ಧ ಭೂಮಿಯಿದು (4)
7. ತಿರಸ್ಕಾರವನ್ನು ಹೀಗನ್ನಿ (5)
9. ದ್ವಾದಶಿಯ ನಂತರದ ತಿಥಿ (4)
10. ಹೊಸತನದ ಪ್ರಜ್ಞೆಯಿದು (5)
11. ದನಕ್ಕಾಗಿ ನಡೆದಿರುವ ಯುದ್ಧ (3)
14. ಹಾವರಾಣಿಯನ್ನು ಹಿಡಿದಿರುವ ಚಕ್ರವರ್ತಿನಿ (2)

*(ಉತ್ತರಕ್ಕೆ 36ನೇ ಪುಟ ನೋಡಿ)*

# ಜಸ್ಟ್ ಮಿಸ್ಸೋ......

**- ಗುಂಡುರಾವ್ ದೇಸಾಯಿ**

ಇಡೀ ಭೂಮಂಡಲದಲ್ಲಿ ಅತಿ ಪ್ರಾಮಾಣಿಕನಾಗಿ, ಅನ್ಯಾಯ, ಹಿಂಸೆ, ಅಸೂಯೆ, ದ್ವೇಷ, ಮುನಿಸು, ಹೊಗಳಿಕೆ, ತೆಗಳಿಕೆ ಮೊದಲಾದ ರಾಗಗಳತ್ತ ಮುಖವೂ ಮಾಡದೆ ಮರಣವನ್ನಪ್ಪಿದ ಪದ್ದು ಯಮನ ಆಸ್ಥಾನಕ್ಕೆ ಬಂದ. ನಕ್ಶೋತ ಹರಿ ಧ್ಯಾನ ಮಾಡುತ್ತ ಬಂದದ್ದನ್ನು ನೋಡಿ ಯಮನಿಗೆ ಗಾಭರಿ ಮತ್ತು ಆಶ್ಚರ್ಯ ಎರಡು ಆತು. ನನ್ನತ್ರ ಬರೋಷ್ಟಿಗೆ ಕಾಲಿಗೆ ಬಿದ್ದು ''ನನ್ನನ್ನ ದಯವಿಟ್ಟು ಸ್ವರ್ಗ ಕಳಿಸು ಹಾಂಗೆ ಹಿಂಗೆ ನಿನಗ ಅದೂ ಕೊಡುತಿ ಇದು ಕೊಡಸ್ತೀನಿ, ಭೂಲೋಕಕ್ಕೆ ಹೋದ್ರೆ ನನ್ನ ಬಂಗ್ಲೇಲಿ ಇಳಿಯೋಕೆ ವ್ಯವಸ್ಥ ಮಾಡಸ್ತೀನಿ ಅನ್ನೋರೆ ಬಾಳು, ಇನ್ನೂ ಕೆಲವರು ಬಡವ ಮಧ್ಯಮನಾಗಿ ಹುಟ್ಟಿಸಾಯೋತನ ಸುಖದ ಅನುಭವಿಸಿಲ್ಲ, ದಯವಿಟ್ಟು ಸ್ವರ್ಗ ಕಳಸು ಅಂತ ಹಲುಬೋರು. ಈ ಪ್ರಾಣಿ ಏನು ಹಲುಬದೆ ಹರಿನಾಮ ಜಪ ಮಾಡ್ತಿದೆ. ಇಂಟರೆಸ್ಟಿಂಗ್ ಕೇಸು'' ಅಂತ ಯಮ ಚಿತ್ರಗುಪ್ತನಿಗೆ ಬಂದು ಪದ್ದುನ ಕೇಸ್ ಹಿಸ್ಟರಿ ಹೇಳಾಕ ತಿಳಿಸಿದ. ಚಿತ್ರಗುಪ್ತ ರೆಕಾರ್ಡ್ ಫೈಲ್ ಓಪನ್ ಮಾಡಿ ಹೌಹಾರಿ

''ಪ್ರಭು!''

''ಏನು ಚಿತ್ರಗುಪ್ತ ಏನಾಯಿತು, ಇವನ ಪಾಪಕರ್ಮಗಳು ಬಹಳಷ್ಟಿವೆಯೆ? ನರಕಕ್ಕೆ ತಳ್ಳುವ ಭಯದಿಂದ ಹೀಗೆ ಹರಿನಾಮ ಸ್ಮರಣೆ ಮಾಡುತ್ತಿರುವನೆ.....?''

''ಅಲ್ಲ ಪ್ರಭು ನಮ್ಮ ಹಂಡ್ರೆಂಡ್ ಪಾಯಿಂಟ್ ಶೀಟನಲ್ಲಿ 99.99 ಔಟ್ ಆಫ್ ತೊಂಡಾನ್ರಿ.''

''ಓ ಮೈ ಗಾಡ್, ಕೃತ, ತ್ರೇತಾ, ದ್ವಾಪರ ಯುಗದಲ್ಲೂ ಇಂಥಾ ಕೇಸ ಕಂಡಿರಲಿಲ್ಲ. ಬಲಿ, ಶಿಬಿ, ಮೊದಲಾದ ರಾಜರು, ವಿಶ್ವಾಮಿತ್ರ ಮೊದಲಾದ ಅನೇಕ ಬ್ರಹ್ಮರ್ಷಿಗಳು ನರವರ್ಸ್ ನೈಂಟಿ ಆದ್ರು. ಇವನು ಹಿಂಗಾ!''

''ಹೌದು ಪ್ರಭು, ಇವನು ನರಕಕ್ಕೂ ಸ್ವರ್ಗಕ್ಕೂ ಕೂಡಾ ಎಲಿಜಿಬಲ್ ಅಲ್ಲಾ, ಹಿ ಈಜ್ ಕಾಂಪಿಟೇಟರ್ ಟು ಇಂದ್ರಾಸ್ ಚೇರ್''

''ಹಾಂ! ನನ್ನ ಚೇರ್ ಕಬಳಾಸಾಕ ಯಾವನ ಬಂದಾನ?'' ಅಂತ ಹೌಹಾರಿ ಬಂದ ದೇವೇಂದ್ರ

''ಈತನೆ, ಲಾರ್ಡ್ ದೇವೇಂದ್ರ. ಯುವರ್ ಕೌಂಟ್ ಡೌನ್ ಈಜ್ ಸ್ಟಾರ್ಟ್'' ಎಂದ ಯಮ

''ನೋ ಇಟ್ಸ್ ಇಂಪಾಸಿಬಲ್, ಆ ಮೂರು ಯುಗಗಳಲ್ಲೂ ಬಿಟ್ಟುಕೊಡದ ಈ ಚೇರನ್ನು ಈ ಹುಲುಮಾನವನಿಗೆ ಬಿಟ್ಟು ಕೊಡಲೇ, ನೋ ಇಂಪಾಸಿಬಲ್ ಇಂಪಾಸಿಬಲ್...''

‘‘ಸಾಕು ಸಾಕು ಎಷ್ಟು ಸರಿ ಅಂತಿರಿ ಇಂಪಾಸಿಬಲ್ ಅಂತ, ನಿಮ್ಮ ಚೇರಿತನ ಎಲಿಜಿಬಿಲಿಟಿ ಬಂದಿರೋದು ಆವನಿಗೆ ತಿಳಿದಿಲ್ಲ ಯಾಮಾರಿಸಿಬಿಡೋಣ’’ ಎಂದ ಚಿತ್ರಗುಪ್ತ

‘‘ವೆರಿಗುಡ್ ಚಿತ್ರಗುಪ್ತ, ನೀನು ಆಮೇಲೆ ಭೇಟಿಯಾಗು ಸರ್‌ಪ್ರೈಜ್ ಗಿಫ್ಟ್ ಕೊಡ್ತನಿ, ಪ್ರೊಸಿಡ್... ಹ್ಯಾಂಗ ಹೇಳು’’

‘‘ನೀವು ಸುಮ್ನಿರಿ ನಾನು ಕೇಳ್ತೀನಿ’’ ಎಂದು ಪದ್ದುನತ್ತ ತಿರುಗಿ ‘‘ಏನ್ ಕಣಯ್ಯ, ಯು ಆರ್ ಎ ಲಕ್ಕಿಯಸ್ಟ್ ಪರ್ಸನ್ ಆಫ್ ಆಲ್, ವೇರ್ ಯು ಸಿಚುಯೇಟ್, ಟೆಲ್ಲ ಮಿ.’’

‘‘ಅಯ್ಯಾ ಸ್ವಲ್ಪ ಕನ್ನಡದಾಗ ಮಾತಾಡಯ್ಯ. ಸತ್ತು ಇಲ್ಲಿ ಬಂದ್ರೂ ಇಂಗ್ಲೀಷ್ ಬಿಡವಲ್ತಲ್ಲ, ಇಲ್ಲೂ ಸುಪ್ರಿಂ ಕೋರ್ಟ ಮಾತೃಭಾಷೆ ಕಡ್ಡಾಯ ಅಲ್ಲ ಅಂತ ಆರ್ಡರ್ ಮಾಡ್ಯಾದ ಏನು?’’

‘‘ನೋ! ಇಂಗ್ಲೀಷ್ ಇಂಟ್ರನ್ಯಾಷನಲ್ ಲಾಂಗ್ವೇಜ್ ಹ್ಯಾಂಗೋ ಇಲ್ಲೂ ಹಾಗೆ, ಬೈ ದಿ ಬೈ, ನೀನು ಸ್ವರ್ಗಕ್ಕಿನ ಸ್ವಲ್ಪ ಹೈ ಪೊಜಿಶನ್‌ಗೆ ಎಲಿಜಿಬಲ್ ಇದ್ದಿ, ನಿನ್ನ ಎಲ್ಲಿ ಕಳಸೋಣ, ನಿನಗ ಏನು ವ್ಯವಸ್ಥಾ ಮಾಡೋಣ ಹೇಳು.’’

‘‘ನಾನು ಆ ಲೆವಲ್‌ಗೆ ಎಲಿಜಿಬಲ್ ಇದ್ದೀನಾ? ವೆರಿ ಗ್ರೇಟ್ ಗ್ರೇಟ್’’ ಅಂತಾ ಪದ್ದು ಬೆನ್ನು ತಟಕೊಂಡ

‘‘ನಾನು ಹೇಳಿಲ್ಲಾ, ಈವ ಗಮಾರ ಇದ್ದಾನಂತ. ನಿನ್ನ ಸೀಟಿಗೆ ಎಲಿಜಿಬಲ್ ಇದ್ದೀನಿ ಅನ್ನೋದೆ ಗೊತ್ತೆ ಇಲ್ಲಂತಾ.’’

‘‘ಒಳ್ಳೆ ಸಮಯ ಯಾಮಾರಸಿಬಿಡು.’’

‘‘ಏನು ಗುಸು ಗುಸು ಚಿತ್ರಗುಪ್ತ. ಹು ಆರ್ ಯುವರ್ ಬಾಸ್, ನಾನೋ? ಇಂದ್ರನೋ?’’

‘‘ಏನು ಯಮರಾಯ, ಹಿಂಗ ಕೋಪಿಸಿಕೊಂತಿ, ನಿನಗೆ ಇವತ್ತು ಸೋಮರಸ ಜೊತೆ ಎಲ್ಲನೂ ಸರಬರಾಜ ಮಾಡ್ತೀನಿ, ಪಾಪ ನಿನಗೆ ರೆಸ್ಟೇ ಇಲ್ಲ ಇವತ್ತು ಫುಲ್ ಎಂಜಾಯ್ ಮಾಡು.’’

‘‘ಓಕೆ ಓಕೆ ದೇವು, ಇವನ ಕೇಸ್ ಏನು ಮಾಡೋಣ, ನಿನಗ ಫಿಟಿಂಗ್ ಇಡೋ ಮಟ್ಟಿಗೆ ಪುಣ್ಯ ಸಂಪಾದಿಸ್ಯಾನ.’’

‘‘ಅದನ್ನೆಲ್ಲ ಚಿತ್ರಗುಪ್ತ ನೋಡಿಕೊಂತಾನ, ನೀನು ಸುಮ್ನೆ ಇರು.’’

‘‘ಆದರೆ ಕೊಡೊ ತೊಳೊ ವಿಷಯದಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ....! ಬೇಡಾ?’’

‘‘ಓಕೆ, ಓಕೆ ಕೂಲ್ ಡೌನ್, ಫಸ್ಟ್ ಯು ಆಂಡ್ ಚಿತ್ರಗುಪ್ತ ಸಾಲೋ ದಿ ಪ್ರಾಬ್ಲಮ.’’

‘‘ಬೈ ದಿ ಬೈ ಪದ್ದು ಉರ್ಫು ಪದ್ಮನಾಭ, ಒಂದು ಐದು ನಿಮಿಷ ಟೈಮು ಕೊಡ್ತೀವಿ ಕೂತು ಯೋಚನೆ ಮಾಡಿ ಹೇಳು ಎಂದ’’ ಚಿತ್ರಗುಪ್ತ.

ಪದ್ದು ‘ಆಯ್ತು’ ಅಂತ ಕಣ್ಣು ಮುಚ್ಚಿ ಕುಳಿತ, ಅಭ್ಯಾಸ ಬಲ ಹೆಂಡತಿ ಬಯ್ಯಾಕ ಸುರು

ಹಚ್ಚಕೊಂಡು ಕೂಡಲೇ ಧ್ಯಾನ ಮಾಡತಾ ಕುಳಿತುಕೊಳ್ಳತಿದ್ದ. ಇಲ್ಲಿ ಆ ನಿರ್ಮಲ, ಪ್ರಶಾಂತ ವಾತಾವರಣ ಅವನಲ್ಲಿ ಏಕಾಗ್ರತೆ ಮೂಡಿಸ್ತು, ಸ್ಥಿತಪ್ರಜ್ಞನಾಗಿ ಧ್ಯಾನಸ್ಥನಾಗಿ ಬಿಟ್ಟ.

ಐದು ನಿಮಿಷ ಆದ ಮೇಲೆ ಚಿತ್ರಗುಪ್ತ ಪದ್ದು ''ಏನ್ ಯೋಚನೆ ಮಾಡಿದ್ರಿ'' ಅಂತಾ ಎಬ್ಬಿಸಿದ.

ರೆಸ್‌ಪಾನ್ಸೆ ಇಲ್ಲ, ಎಬ್ಬಸಿ ಎಬ್ಬಸಿ ಸಾಕಾಯ್ತು, ಯಮನೂ ಅದ ಪ್ರಯತ್ನ ಮಾಡಿದ, ಗಧ ಜಾಡಸಿದ, ಅಲ್ಲಾಡವಲ್ಲ. ''ದೇವು ಹೋಯ್ತು, ಇವ ತಪಸ್ಸಿಗೆ ಕುಳ್ತಾನ, ಹರಿನಾಮ ಸ್ಮರಣೆ ಮಾಡಕತಾನ, ನಿನ್ನ ಸೀಟಿಗೆ ಸಂಚಕಾರ ಬಂತು ದೇವು ಬಂತೂ...''

''ಯು ಬ್ಲಾಡಿ ಮ್ಯಾನ! ಚಿತ್ರಗುಪ್ತ ಎಲ್ಲಾ ಪ್ಲಾನು ಹಾಳುಮಾಡಿದ್ಯೋ, ಯಾಕ ಅವನಗೆ ಟೈಮುಕೊಟ್ಟಿ, ನನ್ನ ಟೈಮು ಸುಮಾರ ಮಾಡಕತ್ಯಾನ, ಇದಕ್ಕ ಏನಾರ ಮಾಡು.''

''ಇವ ಚಾರಸೋ ಬೀಸ್ ನನ್ಮಗ ಇದ್ದಂಗ ಕಾಣ್ತಾನ, ಏನು ಗೊತ್ತಿಲ್ಲದಾಂಗ ನಮ್ಮ ಭಾಷೆ ತಿಳಕೊಂಡಾನ, ಇರಲಿ ಮಾಡಮಾ. ದೇವು ಸರ್, ನೀವು ಹಿಂದ ಮಂಡತನದಿಂದ ತಪಸ್ಸಿಗೆ ಕುಳಿತವರಿಗೆಲ್ಲ ಮಾಡತಿದ್ರಲ್ಲ ಅವನ್ನೆಲ್ಲ ಪ್ರಯೋಗಸ್ರೀ.''

''ಯೆಸ್, ವಾಯು, ವರುಣ, ಅಗ್ನಿ, ಕಮಾನ್ ಆಂಡ ಅಟ್ಯಾಕ, ಡೆಸ್ಟ್ರಾಯ್ ಹಿಸ್ ಡ್ರೀಮ್.''

'ಎಸ್ ಬಾಸ್' ಎಂದು ಗಾಳಿ, ಮಳೆ, ಬೆಂಕಿನ ಪ್ರಯೋಗಿಸಿದ್ರೂ ಆಸಾಮಿ ಜುಮ್ಮೆನ್ನಲಿಲ್ಲ. ಹೆಂಡತಿ ಕಾಟಕ್ಕಿಂತ ಇವು ಪದ್ದುಗ ದೊಡ್ಡವೆನಿಸಲಿಲ್ಲ. ಸ್ವಾರಿ ಮೈ ಬಾಸ್, ವಿ ಆರ್ ಅನ್‌ಎಬಲ್ ಟು ಡಿಸ್ಟ್ರಾಯ್ ಹಿಜ್ ಡ್ರೀಮ್ ಎಂದು ತಲಿತಗ್ಗಸಿಕೊಂಡು ನಿಂತ್ರು.

ಇಂದ್ರ ವಜ್ರಾಯುಧ ಪ್ರಯೋಗಿಸಿದ ಅದು ಕೊರಳಿಗೆ ಹಾರ ಆಯ್ತು, ಬಾಂಬ ದಾಳಿ ಮಾಡಿಸದ ಅವು ಹೂಗಳಾಗಿ ತಲಿಮೇಲೆ ಉದರಿದುವು, ದೇವೆಂದ್ರಗ ನಡುಕ ಸ್ಟಾರ್ಟ್ ಆಯ್ತು, ಏನ್ ಮಾಡ್ಲಿ ''ಹಾಂ ಎಸ್...ಎಸ್... ಐ ಫೌಂಡ್ ಐಡಿಯಾ. ಕಮಾನ, ಮೇನೆಕೆ, ಅಪ್ಸರಾ, ಊರ್ವಶಿ, ರಂಭಾ, ತಿಲೋತ್ತಮೆ. ಕಮಾನ್ ಆಂಡ್ ಡ್ಯಾನ್ಸ್, ಡಿಸ್ಟರ್ಬ್ ಹಿಸ್ ಮೈಂಡ್'' ಎಂದ.

ಎಲ್ಲರೂ ನಾಟ್ಯ ಮಾಡಿದ್ರು, ಮೈ ಸೋಕಿದ್ರು ಪದ್ದು ಜುಮ್ಮೆನ್ನಲಿಲ್ಲ. ದೇವೆಂದ್ರ ಥಂಡಾ ಹೊಡದಾ 'ಅಂತಾ ವಿಶ್ವಾಮಿತ್ರ ಮೊದಲಾದ ಋಷಿಗಳ ಬೋಲ್ಡ್ ಆಗಿದ್ರು ಈ ಮುಂಡೆ ಮಗಾ ನನ್ನ ಕುರ್ಚಿಗೆ ದಾಳಿ ತರಂಗ ಕಾಣ್ತಾನ, ಏನ ಮಾಡ್ಲಿ, ಇಷ್ಟು ದಿನ ಅನುಭವಸಿದ ಈ ಕುರ್ಚಿ ಸುಖ ಇವನಿಗೆ ಬಿಟ್ಟುಕೊಡಬೇಕಾಗತ್ತಲ್ಲ!' ಅಂತ ಕೈ ಕೈ ಹಿಸಿಕಳ್ಳಕತಿದ, ಬ್ರಹ್ಮ, ವಿಷ್ಣು, ಮಹೇಶ್ವರನ ಹತ್ತಿರ ಹೋಗಿ ರಿಕ್ವೆಸ್ಟ್ ಮಾಡಿಕೊಂಡ. 'ನಾವು ಭಕ್ತರಾಧಿನ, ನೋಚಾನ್ಸ್ ಅವನು ಕೇಳಿದ್ದನ್ನ ಅಸ್ತು ಅನ್ನಲೇ ಬೇಕು' ಅಂದ್ರು. 'ಏನು ಮಾಡಲಿ ಸುಸೈಡ್ ಮಾಡಿಕೊಳ್ಳದಷ್ಟ ಬಾಕಿ ಉಳದಾದ' ಅಂತ ಅವಲತ್ತುಕೊಂಡ.

ಎಲ್ಲರೂ ಹೆಲ್ಪಲೆಸ್ ಆಗಿದ್ರು, ಬಾಲ್ ಈಜ್ ಇನ್ ಹಿಜ್ ಗ್ರೌಂಡ, ಕುಟಿಲೋಪಾಯಗಳನ್ನ ಹುಡುಕಾಕತಿದೆ, ಚಿತ್ರಗುಪ್ತನಿಗೆ ಅವನ ಕೇಸನ ರೀ ಸ್ಟಡಿ ಮಾಡಕ ಹೇಳಿದ.

ಹರಿ ಪ್ರತ್ಯಕ್ಷನಾಗಿ ''ವತ್ಸಾ ನಿನ್ನ ಭಕ್ತಿಗೆ ಮೆಚ್ಚಿದೆ, ಯು ಆರ್ ಸೆಂಟ್ ಪರ್ಸೆಂಟ್ ಎಲಿಜಿಬಲ್ ಟು ಇಂದ್ರಾಸ್ ಸಿಟ್, ಪ್ಲೀಜ್ ಟೆಲ್ ಮಿ ವಾಟ್ ಯುವ ವಾಂಟ್.''

ಮನತುಂಬಿ ಸ್ತುತಿಸಿದ ಪದ್ದು ''ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ಮತ್ಯಾವ ಪದವಿಯನೊಲ್ಲೆನಯ್ಯ, ನಿನ್ನ ದರ್ಶನ ಸುಖ ಸಾಕಯ್ಯ, ಹೆಂಡತಿಯ ಕಾಟದಿಂದ ಮುಕ್ತಿಯ ಕೊಡಿಸಯ್ಯ ಧ್ಯಾನಕ್ಕೆ ಕುಳಿತಾಗ ಮೈಸೋಕಿಸಿದ ಕನ್ನಿಕೆಯರ ಸಂಗದಲ್ಲಿ ಇಲ್ಲೇ ಇರಿಸಯ್ಯ, ಇ..ರಿ..ಸ..ಯ್ಯಾ.... ಭವದ ಕಡಲಿನ ಜಂಜಡ ಬೇಡವಯ್ಯ. ಸಾಕಯ್ಯ ಕರುಣಿಸಯ್ಯಾ'' ಎಂದು ಅಂಗಲಾಚಿದ

''ಓ ಪೂರ್ ಫೆಲೊ. ಅಸ್ತೂ'' ಅಂದು ಅದೃಶ್ಯನಾದ.

ಇವು ಬಾಯಿ ಬಿಡುತ್ತಿದ್ದಂತೆ ''ಜಸ್ಟ್ ಮಿಸ್ಸೋ, ಜಸ್ಟ್ ಮಿಸ್ಸೋ'' ಅಂತ ದೇವೇಂದ್ರ ಕೇಕೆ ಹಾಕಾಕತಿದ

''ನಾನು ಹೇಳಲಿಲ್ಲ ಇವ ಗಮಾರ ಅಂತ, ಗಮಾರ ಅಂತ'' ಚಿತ್ರಗುಪ್ತ ಫಯಲ್ ಡಬ್ಬಾ ಹಾಕಿ ಕುಣಿಯಾಕತಿದ

''ನನಗ ರಾತ್ರಿಗೆ ವರ್ಕ್ಔಟ್ ಆತೊ ವರ್ಕ್ಔಟ ಆತು'' ಅಂತ ಯಮ ಹೆಗರಾಡಕತಿದ

ದೇವೆಂದ್ರ 'ಯಾ ಹೂ' ಅಂತ ಹಾರಿ ''ಅಲ್ಲ ಮೂಢ, ಪೆದ್ದ ಪದ್ದು, ಹರಿ ಇಂದ್ರ ಪದವಿನ ಕೇಳಿದ್ರ ಒಲ್ಲೆಂದು ರಂಬ ಊರ್ವಶಿನ ಬೇಡಿದೆಲ್ಲ ನಿನ್ನ ಬೆಪ್ಪತನಕ್ಕ ನಗಬೇಕೋ ಅಳಬೇಕು. ಇಂದ್ರ ಪದವಿ ಸಿಕ್ಕಿದ್ರ ಎಲ್ಲ ನಿನಗ ದಕ್ಕತಿತ್ತಿಲ್ಲೋ?''

''ಅಯ್ಯಾ ದೇವೆಂದ್ರ, ನೀನು ಸುಮ್ಮನಿರತಿದ್ದೆಯಾ, ಒಬ್ಬರಿಗಾದ್ರೂ ನಕ್ಕೋತ ಚೇರ್ ಬಿಟ್ಟುಕೊಟ್ಟಿಯಾ, ಭೂಲೋಕದ ರಾಜಕಾರಣಿಗಳಾಂಗ ಅಂಟಿಕೊಂಡ ಕೂತಿರತಿಯಾ. ಒಂದು ಲೆಕ್ಕಕ್ಕ ನಮ್ಮ ಭೂಲೋಕದವರನ್ನ ಸರಸಬಹುದು, ನಿನ್ನ ಸರಸಾಕಾಗತದನು? ಏನಾರ ಕಿತಾಪತಿ ಮಾಡಿ ಕೀಳುಕೊಂತಿದ್ದೆ, ನಾನು ಯಾರತ್ರೂ ವೈರತ್ವ ಕಟ್ಟಿಕೊಂಡವಲ್ಲ, ಹೆಂಡತಿ ಬಲದಿಂದಲೇ ಇಲ್ಲಿತನ ಬಂದಾವ, ಆಕಿ ವರ್ತನೆಗೆ ಬೇಸತ್ತು ಜಿಗುಪ್ಸೆ ವೈರಾಗ್ಯ ಹೊಂದಿ ಬಸವಣ್ಣ ಸಪ್ತ ಸೂತ್ರಗಳಿಗೆ ಜೋತು ಬಿದ್ದಾವ, ಅಲ್ಲಂತ್ರೂ ಸುಖ ಪಡಾಕ ಆಗಲಿಲ್ಲ, ಇಲ್ಲೇರ ಸ್ವರ್ಗದಾಗ ಹಾಯಾಗಿ ಇರತೀನಿ ಟಾಟಾ ಬರ್ಲಾ'' ಅಂತ ಪಕ್ಕದಲ್ಲಿ ಸೇವೆಗಾಗಿ ಸಿದ್ಧವಾಗಿದ್ದ ರಂಬೆಯ ಕೊರಳಿಗೆ ಕೈ ಹಾಕಿದ.

''ಥತ್ತೆರಿಕೆ ನಿಮಗ ಹೊತ್ತು ಗೊತ್ತು ಇಲ್ಲನ್ರಿ ಅಲ್ಲಿ ಮುಲ್ಲಾ ಕೂಗಾಕತನ, ಕಸ ಯಾರ ಬಳಿಬೇಕು, ಮುಸುರಿ ಯಾರ ತಿಕ್ಕಬೇಕು? ದೊಡ್ಡದಾಗಿ ಕೈ ಹಾಕ ಬಂದ್ರು, ಎದ್ದೇಳಿ'' ಎಂದು ದಬ್ಬಿದ್ಲು ಪಮ್ಮಿ.

ಕಣ್ತೆರದ ಆದ ಹೆಂಡತಿ, ಅದೇ ಹಾಳು ಮನಿ ಇತ್ತು, ಬೆಳಗ್ಗೆ ಬಿದ್ದ ಕನಸು ನನಸಗತವಾ ಅಂತ ಪೂರ್ಣಗೊಳಿಸಲು ಕ್ಷಣಾರ್ಧದಾಗ ಹೊದಿಕೆ ಎಳೆದು ಮಲಕೊಂಡ, ಪಮ್ಮಿ ಪಕ್ದಲ್ಲಿದ್ದ ತಂಬಿಗೆ ನೀರು ಸುರದ್ಲು, 'ಅದೇಂಗ ನನಸಾಗ ಬಿಡ್ತನಿ' ಎಂದು. ಅವನ ಪಾಲಿಗೆ ಯಮ ಪಮ್ಮಿನ ಆಗಿದ್ಲು.

☆

# ಏಕಾದಶಿ ವ್ರತ ಭಂಗ ಪುರಾಣವು

**- ಶರತ್ ಕಲ್ಕೋಡ್**

**ಮಾ**ರ್ನಿಂಗ್‌ವಾಕ್‌ಗೆ ಸಾಥ್ ನೀಡಿದ್ದರೂ ತಮ್ಮಣ್ಣನ ವಾಕ್‌ನಲ್ಲಿ ಎಂದಿನ ಲವಲವಿಕೆ ಇರಲಿಲ್ಲ. ಕೈಬೀಸುತ್ತಾ ದಾಪುಗಾಲು ಹಾಕುತ್ತಾ ಅರಳು ಹುರಿದಂತಹ ಮಾತು, ಸುತ್ತಮುತ್ತಲಿದ್ದವರ ಗಮನ ಸೆಳೆಯುವಂತಹ ಹೇಷಾವರ ನಗೆ, ಮುಖದಲ್ಲಿ ಚಿಮ್ಮುವ ಉತ್ಸಾಹದ ಕಳೆ ಎಂದಿನ ಯಾವ ಹುರುಪು ಇಲ್ಲ. ದಣಿದ ಮನ, ಬಸವಳಿದ ದೇಹ, ಬಾಡಿದ ಮುಖ, ಭಾರವಾದ ಹೆಜ್ಜೆ, ನಗೆಯಿರಲಿ ಮಾತಿಲ್ಲಕಥೆಯಿಲ್ಲ! ಮನೆಯಲ್ಲಿ ಏನೋ ಎಡವಟ್ಟು ಆಗಿರಬೇಕೆಂದು ತಮ್ಮ ಆರನೇ ಇಂದ್ರದಿಂದ ಗ್ರಹಿಸಿದ ಶಾಸ್ತ್ರೀಜಿ ತಮ್ಮಣ್ಣನ ಬೆನ್ನು ಸವರಿ ''ಏನಾಯಿತು ಪುಟ್ಟಾ, ಯಾಕೆ ಬಹಳ ಸಪ್ಪಗಿದ್ದೀಯಾ, ಮೈಗೆ ಹುಷಾರಿಲ್ವಾ?'' ಎಂದು ತಮ್ಮ ಶೈಲಿಯಲ್ಲೇ ಮುದ್ದಿನ ಮಳೆಗರೆದರು.

**ಗ್ರಹಚಾರ ಕೆಟ್ಟಾಗ ಆಗೋದೆಲ್ಲವೂ ಎಡವಟ್ಟೇ ಅಲ್ವಾ?**

''ಏನ್ಮಾಡೋದು ಗುರುಗಳೇ, ಗ್ರಹಚಾರ ಕೆಟ್ಟಾಗ ಆಗೋದೆಲ್ಲವೂ ಎಡವಟ್ಟೇ ಅಲ್ವಾ?''

ಗುರು ಶಾಸ್ತ್ರೀಜಿಗೆ ಶಿಷ್ಯ ತಮ್ಮಣ್ಣನ ಮಾತು ಸ್ಪಷ್ಟವಾಗದೇ ಒಗಟಿನಂತೆ ಕಂಡು ''ತಲೆ ಹೋಗುವಂತಾ ಎಡುವಟ್ಟು ಏನಾಯಿತೋ ಮರಿ? ನಾವೆಲ್ಲಾ ಇಲ್ವಾ?'' ಸಾಂತ್ವನದ ನುಡಿಗಳನ್ನಾಡಲು ಹೊರಟಾಗ, ಅವರ ಮಾತನ್ನು ಮಧ್ಯದಲ್ಲೇ ಸೆನ್ಸಾರ್ ಮಾಡಿ, ತಮ್ಮಣ್ಣ ಮರು ಸವಾಲೆಸೆದ:

''ಮೊನ್ನೆ ನೀವು ಒಂದು ಮನಸ್ಸು ಮಾಡಿದ್ದರೆ ನಿನ್ನೆ ನನಗೆ ಎಡವಟ್ಟಿನ ಪ್ರಸಂಗವೇ ಎದುರಾಗುತ್ತಿರಲಿಲ್ಲ! ಇವತ್ತು ನೀವು ನನಗೆ ಸಮಾಧಾನ ಮಾಡುವ ಪ್ರಮೇಯವೂ ಬರುತ್ತಿರಲಿಲ್ಲ!!''

ಶಾಕ್ ಹೊಡೆದವರಂತೆ ಒಂದು ಘಳಿಗೆ ನಿಂತ ಶಾಸ್ತ್ರೀಜಿ, ಮರು ಘಳಿಗೆಯಲ್ಲೇ ಸುಧಾರಿಸಿಕೊಂಡು ಕೇಳಿದರು: ''ನನ್ನಿಂದ ನಿನಗೆ ಎಡವಟ್ಟಾಗುವಂಥಾ ಪ್ರಸಂಗ ಎದುರಾಯಿತಾ? ಎಂಥ ಒಗಟಿನ ಮಾತಾಡ್ತೀಯಾ ತಮ್ಮಣ್ಣಾ? ಬಿಡಿಸಿ ಹೇಳ್ಬಾರ್ದಾ!?''

''ಮೊನ್ನೆ ಹೂವೇಗೌಡ್ರು, ಅವರೂರಿಂದ ತಂದಿದ್ದ ಕುಂಬಳಕಾಯಿನ ಪಾರ್ಕಿಗೆ ತಂದು ನಮಗೆಲ್ಲರಿಗೂ ಹಂಚಿದರಲ್ಲಾ, ಆವಾಗ, ನೀವು ನಾಳೆ ಪ್ರಥಮ ಏಕಾದಶಿ ಅಂತ ಒಂದ್ಮಾತು ಹೇಳಬಾರ್ದಾಗಿತ್ತಾ? ಎಷ್ಟಂದರೂ ನೀವು ನಿತ್ಯ ಪೂಜೆ-ಪುನಸ್ಕಾರ ಮಾಡೋ ಶಾಸ್ತ್ರಿಗಳಲ್ವಾ!? ಅಷ್ಟು ಹೇಳಿದ್ರೆ ನಿನ್ನೆ ನಾನು ಮನೆಯಲ್ಲಿ ಎಡವಟ್ಟಿನ ಪ್ರಸಂಗ ಎದುರಿಸ್ತಾಯಿರಲಿಲ್ಲ ಗೊತ್ತಾ ನಿಮಗೆ?''

ಮೊನ್ನೆ ಹೂವೇಗೌಡ್ರು ಊರಿಂದ ತಂದ ಕಂಬಳಕಾಯನ್ನು ಪಾರ್ಕಿನ ಗೆಳೆಯರಿಗೆ ದಾನ ಮಾಡಿದ್ದಕ್ಕೂ, ನಿನ್ನೆಯ ಪ್ರಥಮ ಏಕಾದಶಿಗೂ, ಇವತ್ತು ತಮ್ಮ ಮೆಚ್ಚಿನ ಶಿಷ್ಯನ ನೆಮ್ಮದಿ ಎಡವಟ್ಟಾಗುವುದಕ್ಕೂ ಒಂದಕ್ಕೊಂದು ಲಿಂಕ್ ಆಗಲು ಹೇಗೆ ಸಾಧ್ಯವೆಂಬುದನ್ನು

ಗ್ರಹಿಸಲಾಗದೇ ತಬ್ಬಿಬ್ಬಾಗಿ ಶಾಸ್ತ್ರೀಜಿ, ತಮ್ಮಣ್ಣನತ್ತ ತಿರುಗಿ ''ಅರ್ಥವಾಗುವ ಹಾಗೆ ಸ್ವಲ್ಪ ಬಿಡಿಸಿ ಹೇಳಯ್ಯಾ!'' ಎಂದು ರೇಗಿದರು.

''ಮೊನ್ನೆ ಹೂವೇಗೌಡ್ರು ನಮಗೆಲ್ಲಾ ಹಂಚಿದ ಕುಂಬಳಕಾಯಿ ಮನೆಗೆ ತಗೊಂಡು ಹೋಗಿ ಕೊಟ್ನಾ? ಆ ಕುಂಬಳಕಾಯಿ ಬೆಂಗಳೂರು ಮಾರ್ಕೆಟ್‌ನ ಕುಂಬಳಕಾಯಂತೆ ಇರದೇ ಒಳ್ಳೇ ಘಮಘಮಾಂತ ಪರಿಮಳ ಹೊಡೀತಾಯಿತ್ತಾ? ಎಷ್ಟಾದ್ರೂ ಹಳ್ಳಿಲ್ಲೀ ಹಟ್ಟೀ ಗೊಬ್ರಾ ಹಾಕಿ ಬೆಳೆದಿದ್ದಲ್ವಾ? ನನ್ನ ಶ್ರೀಮತಿಗೂ ಬಹಳ ಖುಷಿಯಾಯ್ತು. ಕುಂಬಳಕಾಯಿ ಹಾಕಿ ಮಜ್ಜಿಗೆ ಹುಳಿ ಮಾಡ್ತೀನಿ. ಮಜ್ಜಿಗೆ ಹುಳಿ ಅಂದ್ರೆ ನಮ್ಮಿಬ್ಬರಿಗೂ ಪಂಚಪ್ರಾಣ ಅಲ್ವೇನ್ರೀ! ತಿನ್ನದೇ ಬಹಳ ದಿನ ಆಯ್ತು ಎಂದು, ಈರುಳ್ಳಿ ಹಾಕಿದ್ದ ಉಪ್ಪಿಟ್ಟು ಕೊಟ್ಟು ಉಪಚಾರ ಮಾಡಿದಳು. ನಂಗೂ ಬಾಯಲ್ಲಿ ನೀರೂರಿತು. ಕುಂಬಳಕಾಯಿ ಹೆಚ್ಚಿ ಕೊಟ್ಟು, ಉಪ್ಪಿಟ್ಟು ತಿಂದು, ರಾತ್ರಿ ಗಡದ್ದಾಗಿ ಮಜ್ಜಿಗೆ ಹುಳಿ ಹೊಡೀಬಹುದೆಂಬ ಆಸೆಯಿಂದ ಆಫೀಸ್ಸಿಗೆ ಹೋದೆ.''

ವಾಕಿಂಗ್ ನಿಲ್ಲಿಸಿ ನಿಟ್ಟುಸಿರುಗರೆದು ಮತ್ತೆ ಹೆಜ್ಜೆ ಕಿತ್ತಿಡುತ್ತಾ ಭಾರವಾದ ದನಿಯಲ್ಲಿ ತಮ್ಮಣ್ಣ ಮಾತು ಮುಂದುವರೆಸಿದ:

''ಮಧ್ಯಾಹ್ನ ಲಂಚ್ ಅವರ್. ಕ್ಯಾಂಟಿನ್‌ನಿಂದ ತರಿಸಿದ್ದ ಚಪಾತಿಯನ್ನು ಈರುಳ್ಳಿ ಹುಳಿಯಲ್ಲಿ ಅದ್ದಿ ತಿನ್ನುತ್ತಿರುವಾಗ ರಿಂಗಣಿಸಿದ ಮೊಬೈಲ್ ನೋಡಿದರೆ ಹೋಂಮಿನಿಸ್ಟ್ರದೇ! ಪ್ರೀತಿಯಿಂದ ಕಾಲ್ ರಿಸೀವ್ ಮಾಡಿದ್ದೇ ಎಡವಟ್ಟಾಯ್ತು ನೋಡಿ.''

''ಏನ್ ಏನ್ ಎಡವಟ್ಟಾಯ್ತೋ?'' ಮೌನಕ್ಕೆ ಸರಿದು ನಿಟ್ಟುಸಿರುಗರೆಯುತ್ತಿದ್ದ ತಮ್ಮಣ್ಣನನ್ನು ಗಾಬರಿಯಿಂದ ಎಚ್ಚರಿಸಿ ಪ್ರಶ್ನಿಸಿದರು ಶಾಸ್ತ್ರೀಜಿ.

''ಏನ್ರೀ ಊಟ ಆಯ್ತಾ? ಪ್ರಶ್ನಿಸಿದಳು. ಸಿಟ್ಟಿನ ದನಿ ನೋಡಿ ಇಲ್ಲಾ ಮಾಡ್ಬೇಕು, ಕ್ಯಾಂಟಿನ್‌ನಲ್ಲಿ ಚಪಾತಿ, ಈರುಳ್ಳಿ ಹುಳಿ ಮಾಡಿದ್ದಾರೆ. ಚೆನ್ನಾಗಿರುತ್ತೆ ಕಣೆ ಎಂದೆ. ನಿಮ್ಮ ಯೋಗ್ಯತೆಗೆ ಒಂದಿಷ್ಟು ಬೆಂಕಿ ಹಾಕ್ತು. ಇವತ್ತು ಪ್ರಥಮ ಏಕಾದಶಿ ಅಲ್ವೇನ್ರೀ? ಉಪವಾಸ ಮಾಡೋದಿರಲಿ, ಬೆಳಗ್ಗೆ ಈರುಳ್ಳಿ ಉಪ್ಪಿಟ್ಟು ಬೇರೆ ತಿಂದುವಲ್ರೀ. ಆಚಾರ ವಿಚಾರ, ದೇವ್ರು ದಿಂಡ್ರು ಒಂದೂಬೇಡ ನಿಮ್ಗೆ. ಪಂಚಾಂಗ ತರಿಸಿಕೊಟ್ಟರೂ ನೋಡೋಕೆ ಪುರಸೊತ್ತಿಲ್ಲ ನಿಮ್ಗೆ! ಬೆಳಗ್ಗೆ ಎದ್ದವರಿಗೆ ಪಂಚಾಂಗ ನೋಡೋಕೆ ಏನ್ ಧಾಡಿ! ವಾಕಿಂಗ್ ಅಂತೆ ವಾಕಿಂಗ್! ಹೋಗಲಿ ಪಾರ್ಕಿನಲ್ಲಿ ವಾಕಿಂಗ್ ಮಾಡ್ತಾರಲ್ಲಾ ನಿಮ್ಮ ಜೊತೆ ಹಿರಿಯರಾದ ಆ ಮುದುಕ್ರು ತದುಕ್ರಿಗಾದರೂ ಸ್ವಲ್ಪ ಬುದ್ಧಿ ಬೇಡ್ವೇ? ಬೇರೇ ಯಾರಿಗಲ್ಲದಿದ್ರೂ ಆ ಶಾಸ್ತ್ರಿಗಳಿಗಾದರೂ ಜ್ಞಾನ ಬೇಡ್ವಾ? ಅವ್ರು ಪ್ರತಿನಿತ್ಯ ತಿಥಿಪತಿ ಹೇಳಿ ಜಪತಪ, ಪೂಜೆಪುನಸ್ಕಾರ ಮಾಡೋರಲ್ವಾ? ಅವ್ರಾದರೂ ಪ್ರಥಮ ಏಕಾದಶಿ ಬಗ್ಗೆ ಹೇಳ್ಬಾರ್ದಾ? ಅಂಥವರ ಸಹವಾಸ ಬೇಡಾಂದ್ರೂ ನೀವು ಕೇಳೋದಿಲ್ಲ, ಸದ್ಯ ಶಿವಮೊಗ್ಗಾದ ಅಮ್ಮನ ಮನೆಯಿಂದ ಫೋನ್

ಬಂದದ್ದಕ್ಕೆ ಇವತ್ತು ಪ್ರಥಮ ಏಕಾದಶಿ ಅಂತ ಗೊತ್ತಾಗಿ ಮಧ್ಯಾಹ್ನ ಉಪವಾಸ ಮಾಡಿದೆ. ಇಲ್ದೇಹೋಗಿದ್ರೆ ಎಂಥ ಅನಾಹುತಾ ಆಗ್ತಿತ್ತು ಗೊತ್ತಾ? ಹೆಚ್ಚಿದ ಕುಂಬಳಕಾಯಿನಾ ಹಾಗೇ ಫ್ರಿಜ್‌ನಲ್ಲಿ ತೆಗೆದಿರಿಸಿದ್ದೀನಿ. ಮಜ್ಜಿಗೆ ಹುಳಿ ನಾಳೆ ಮಾಡಿದರಾಯ್ತು. ಸಾಯಂಕಾಲ ಫಲಹಾರಕ್ಕೆ ವೆಜಿಟೆಬಲ್ ಉಪಿಟ್ಟು ಮಾಡ್ತೀನಿ. ರಾತ್ರಿಯಾದರೂ ನೀವು ಉಪವಾಸ ಮಾಡಿ ಎಂದಳು. ಅವಳ ಆಜ್ಞೆಯನ್ನು ಪರಿಪಾಲಿಸಿದೆ. ನಾಳೆ ಪ್ರಥಮ ಏಕಾದಶಿ ಅಂತ ಮೊನ್ನೆ ನೀವು ಒಂದು ಮಾತು ಹೇಳಿದ್ರೆ ನಿನ್ನೆ ಇಷ್ಟೆಲ್ಲಾ ಎಡವಟ್ಟು ನಂಗೆ ಆಗ್ತಾಯಿರಲಿಲ್ಲಾ ಅಲ್ವಾ ಗುರುಗಳೇ.''

''ಅಲ್ಲಯ್ಯಾ ನಾ ಹೇಳೋದು ಹಂಗಿರ್‍ಲಿ. ಪಂಚಾಂಗ ಇಲ್ವೇನಯ್ಯಾ ನಿಮ್ಮ ಮನೆಯಲ್ಲಿ? ನಿನ್ನ ಶ್ರೀಮತಿಯವರೇ ನೋಡಿದ್ರೆ ಆಗ್ತಾಯಿರಲಿಲ್ವಾ?'' ಶಾಸ್ತ್ರೀಜಿ ತಿರುಗೇಟು ನೀಡಲು ನೋಡಿದರು.

''ಹೇಳ್ದೆ ಗುರುಗಳೇ, ಮೂರೊತ್ತೂ ಆ ಹಾಳು ಟಿವಿ ಸೀರಿಯಲ್ ನೋಡ್ತಾ ಕೂತಿರ್ತೀಯಲ್ಲಾ! ಆ ಬ್ರೇಕ್ ಟೈಂನಲ್ಲಾದ್ರೂ ಪಂಚಾಂಗ ನೋಡ್ಬಾರ್ದಾಗಿತ್ತೇ?''

''ಅದಕ್ಕೆ ಏನಂದ್ರು ನಿನ್ನ ಶ್ರೀಮತಿ'' ಶಾಸ್ತ್ರಿಗಳು ಕುತೂಹಲದಿಂದ ಪ್ರಶ್ನಿಸಿದರು.

''ಹೆಂಗಸ್ರು ಪಂಚಾಂಗ ನೋಡ್ಬಾರದೂಂತ ಶಾಸ್ತ್ರ ಹೇಳ್ತದಲ್ರೀ? ಇಲ್ದೇಯಿದ್ರೆ ನಿಮ್ಗೆ ಯಾಕೆ ಹೇಳ್ತಾಯಿದ್ದೆ? ಎಂದಳು. ಗುರುಗಳೇ ನಂಗೊಂದು ಉಪಕಾರ ಮಾಡ್ತೀರಾ'' ದೈನ್ಯದಿಂದ ಕೇಳಿದ ಶಿಷ್ಯ.

''ಏನು?'' ಅಧಿಕಾರದಿಂದ ಕೇಳಿದರು ಶಾಸ್ತ್ರಿಗಳು.

''ವಾಕಿಂಗಿಗೆ ಬರುವಾಗ ಇನ್ನು ಪ್ರತಿದಿನ ವಾರ ನಕ್ಷತ್ರ ತಿಥಿ ಮಾಸ ಸಂವತ್ಸರ ನೋಡಿಕೊಂಡು ಬಂದು ಹೇಳಿ ನನ್ನನ್ನ ಕಾಪಾಡ್ತೀರಾ?''

ನಮಾಜ್ ಮಾಡಕ್ಕೆ ಹೋಗಿ ಮಸೀದಿ ತಲೆ ಮೇಲೆ ಬಿದ್ದವರಂತೆ ಶಾಸ್ತ್ರೀಜಿ ದಂಗು ಬಡಿದು ನಿಂತರು!

☆

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

2. ನಾಜೂಕುತನ 4. ರವೆ 5. ಗತ್ತು 6. ಪಯಣ 7. ನಿರುತ್ತರ 8. ಗಣಕಯಂತ್ರ 11. ಕಡುಜಾಣ 12. ದಮನ 13. ಮುದ 14. ರಾಶಿ 15. ನವತರುಣಿ

**ಮೇಲಿಂದ ಕೆಳಕ್ಕೆ**

1. ಪ್ರತ್ಯುಪಕಾರ 2. ನಾವೆ 3. ನಗರ 4. ರಣರಂಗ 7. ನಿರಾಕರಣ 9. ತ್ರಯೋದಶಿ 10. ನವೀನ ಪ್ರಜ್ಞೆ 11. ಕದನ 14. ರಾಣಿ

# ಅಣಕು ಗೀತೆ

**- ಎನ್. ರಾಮನಾಥ್ / ಶ್ರೀವತ್ಸ ಜೋಶಿ**

(ಇದು ಸಮಸ್ತ ಸುದ್ದಿ ವಾಹಿನಿಗಳ ''ಹೃದ್ಘೋಷಕ/ಕಿ ವಾಗ್ದೇವತೆಗಳಿಗೆ'' ಸಮರ್ಪಣೆ)

ಕೊಚ್ಚೇವು ಕನ್ನಡದ Shapeಅ
ಪದಪದದ Shapeಅ ವಾಕ್ಯಗಳ Shapeಅ
ಕೊಚ್ಚುತ್ತ ಭಾಷೆಯು ಕುರೂಪ..... ಕನ್ನಡದ Shapeಅ ॥ ಪ ॥

ಬಲುದಿನಗಳಿಂದ ವಾಹಿನಿಗಳಿಂದ ಕನ್ನಡವ ಕೊಚ್ಚೇ ಸಾಗೇವು
ಎಲ್ಲೆಲ್ಲಿ 'ಅ' ಇರಲು ಅಲ್ಲಲ್ಲಿ 'ಹ' ವೇ, ಎಲ್ಲೆಲ್ಲಿ 'ಹ' ವೋ ಅಲ್ಲಿಯೇ 'ಅ'
ದ ಎಂದು ಇರಲಿ ಧ ಎಂದು ಇರಲಿ ನಮಗೆಲ್ಲ ಒಂದೇ ಹುಚ್ಚಾರ
ಕೊಚ್ಚೇವು ಬರಹ ಕೊಚ್ಚೇವು ನುಡಿಯ ಕೊಚ್ಚೇವು ನಿಮ್ಮ ಸಿಹಿನುಡಿಯ
ನಮ್ಮ ನಾಲ್ಗೆ ಸೀಳಿ ಉಪ್ಪಾಕಿದರೂನೂ ಕೊಚ್ಚೇವು ಕನ್ನಡದ Shapeಅ ॥ 1 ॥

Blur ಆದ ಚಿತ್ರ Scrolling ವಿಚಿತ್ರ ಅರ್ಥ ಅನರ್ಥಗಳ ಬೀರೇವು
ಕೊಚ್ಚಿರುವ ರೂಪದಲಿ ತಾಯ್ನುಡಿಯನು ಅಚ್ಚಳಿಯದಂತೆ ತೋರೇವು
ಒಡಲೊಳೊಲ ಕೊಚ್ಚೆಯ ಕಿಡಿಗಳನು ನಿಮ್ಮ ಬೆಡ್ ರೂಮಿಗೇ ತೂರೇವು
ಏರಿರಲು ಟೀಆರ್‌ಪಿ ಎಲ್ಲಿಹುದು ಭೀತಿ ನಮಗಿರಲಿ ನಿಮ್ಮ ಹಿಡಿಶಾಪ
ಮನೆಮನೆಗಳಲ್ಲಿ ಮನಮನಗಳಲ್ಲಿ ಕೊಚ್ಚೇವು ಕನ್ನಡದ Shapeಅ ॥ 2 ॥

ನಮ್ಮವರು ಕಟ್ಟಿದ ಛಾನಲ್ ಉಳಿಸಲು ಹೆಲ್ಲಾರೂ ಹೊಂದುಗೂಡೇವು
ನಿಮ್ಮೆದೆಯು ನಡುಗುವೀ ಮಾತಿನಲಿ ಮಾತುಗಳ ಪೂಜೆಯ ಮಾಡೇವು
ನಮ್ಮುಸಿರು ಟೀಆರ್‌ಪಿ ಎಂಬುದೊಂದೇ ಮಂಗಗಳಗೀತ ಹಾಡೇವು
ತೊರೆದೇವು ಬಾಲ ಕಡೆದೇವು ಕೊಂಬ ಪಡೆದೇವು ಆಕ್ಷರಕೆ ಹೊಸರೂಪ
ಕರುಳನ್ನು ಕಿವುಚಿ ಕೊರಳನ್ನು ತಿರುಚಿ ಕೊಚ್ಚೇವು ಕನ್ನಡದ Shapeಅ ॥ 3 ॥

☆




“ ಡಾಕ್ಟರ್ ಬಂದಿದಾರೇನಯ್ಯ ? ”



ನಮಗೆ ಈಗ ಬೇಕಾದ್ದು – ಶಾಂತಿ – ಶಾಂತಿ – ಶಾಂತಿ.




# ಇಲ್ಲಿ ಪಿಂಡಗಳು ತಿರುಗುತ್ತವೆ

**- ಪ್ರಶಾಂತ ಅಡೂರ**

**ಒಂ**ದು ವಾರದ ಹಿಂದೆ ನಮ್ಮ ದೋಸ್ತ ಭಟ್ಟನ ಜೊತಿ ಅವರಜ್ಜಂದ ಧರ್ಮೋದಕ ಬಿಡಲಿಕ್ಕೆ ಉಪ್ಪಿನಂಗಡಿಗೆ ಹೋಗಿದ್ದೆ. ಹಂಗ ಅವರಜ್ಜೇನ ನನಗೇನ ಆಸ್ತಿ ಕೊಟ್ಟ ಸತ್ತಿಲ್ಲಾ. ಆದರೆ ನಮ್ಮ ದೋಸ್ತ ಒಬ್ಬನ ಹೊಂಟಿದ್ದಾ, ಮ್ಯಾಲೆ ನಂಗೂ ಬಾಳ ದಿವಸ ಆಗಿತ್ತ ಎಲ್ಲೂ ಅಡ್ಡಾಡಲಿಕ್ಕೆ ಹೋಗಲಾರದ ಅಂತ ನಾ ಅವನ ಜೊತಿ ಹೋಗಿದ್ದೆ.

ಅವರಜ್ಜನ ಊರು ಉಪ್ಪಿನಂಗಡಿ ಹತ್ತಿರದ ಒಂದು ಸಣ್ಣ ಹಳ್ಳಿ. ಅವರ ಮಾಮಾ ಅಜ್ಜನ ಎಲ್ಲಾಕಾರ್ಯಕ್ರಮ ತಮ್ಮ ತೋಟದ ಮನ್ಯಾಗ ಇಟಗೊಂಡಿದ್ದರು. ನಾನು ಭಟ್ಟಾ ಅವರ ಮಾಮನ ಜೊತಿ ಪಿಂಡಾ ಬಿಡಲಿಕ್ಕೆ ಅಲ್ಲೇ ಹತ್ತಿರ ಇರೋ ನೇತ್ರಾವತಿ ನದಿಗೆ ಹೋದ್ವಿ. ನಾ ಪಿಂಡಾ ಬಿಡೋದ ಫೋಟೋಗ್ರಾಫಿ ಮಾಡಿ ಫೇಸಬುಕ್ಕಿನಾಗ ಹಾಕಬೇಕಂತ ಕ್ಯಾಮರಾ ಬ್ಯಾರೆ ತೊಗೊಂಡ ಹೋಗಿದ್ದೆ. ಇನ್ನೇನ ಆ ಭಟ್ಟನ ಮಾಮ ಸ್ನಾನ ಮಾಡಿ ಪಿಂಡಾ ಹಿಡಕೊಂಡ 'ರೆಡಿ, ಸ್ಟಡಿ ಗೋ' ಅನ್ನೋವ ಇದ್ದಾ ಅಷ್ಟರಾಗ ನನ್ನ ಕಣ್ಣಿಗೆ ಈ ಬೋರ್ಡ್ ಬಿತ್ತ.

ಆ ಬೋರ್ಡ್ ಮ್ಯಾಲೆ ಬಾಳ ಕ್ಲಿಯರ್ ಬರದಿದ್ದರು. 'ಇಲ್ಲಿ ಪಿಂಡ ಬಿಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ, ಕಾರಣ: ನೇತ್ರಾವತಿ ನದಿಯನ್ನು ತಿರುಗಿಸಲಾಗುವುದು''

ಅಂತ. ನಾ ಅದನ್ನು ಓದಿ ಬಹುಶಃ ಇಲ್ಲೇ ನದಿ ಒಳಗ ಸುಳಿ ಇರಬೇಕ, ಅದಕ್ಕೆ ಅವರ ನದಿನ ತಿರಗುತ್ತೆ ಅಂತ ಬರದಿರಬೇಕ ಅನ್ಕೊಂಡೆ. ಹಂಗ ಸುಳಿ ಒಳಗ ಪಿಂಡಾ ಬಿಟ್ಟರ ಆ ಪಿಂಡನು ತಿರಗೋದ ಆ ಮಾತ ಬ್ಯಾರೆ. ನಾ ಅದನ್ನು ನೋಡಿದವನ 'ಏ, ಮಾಮಾ ಬ್ಯಾರೆ ಯಾವುದರ ನದಿ ಇದ್ದರ ನೋಡಪ್ಪಾ, ಎಲ್ಲರ ನಿಮ್ಮಪ್ಪನ ಪಿಂಡ ಇಲ್ಲೇ ತಿರ್ಕೋತ ನಿಂತರ ಏನ ಮಾಡ್ತಿ. ಆಮ್ಯಾಲೆ ಪಿಂಡ ತಿರಗಲಿಕತ್ತದಂತ ಕಾಗಿ ಪಿಂಡನೂ ಆಗಲಿಕ್ಕಿಲ್ಲಾ. ಹಿಂಗಾದ್ರ ನಿಮ್ಮಪ್ಪನ ಆತ್ಮನೂ ಮನ ಸುತ್ತ ತಿರಗತದ ನೋಡ... ವಿಚಾರ ಮಾಡ' ಅಂತ ನಾ ಅವಂಗ ಹೆದರಿಸಿದೆ.

ಅಂವಾ ಒಂದು ಸರತೆ ಆ ಬೋರ್ಡ್ ನೋಡಿ ನಕ್ಕ. ಸೀದಾ ಅವರಪ್ಪನ ಪಿಂಡಾ ಅಲ್ಲೇ ನದಿ ಒಳಗ ಬಿಟ್ಟ, ಆ ಪಿಂಡ ಮುಳಗತೋ, ತಿರಗತೋ, ತೇಲತೋ ನೋಡಲಾರದ ಸೀದಾ ವಾಪಸ ಬಂದಾ.

'ಇಲ್ಲೆ ಪಿಂಡಾ ಬಿಡ ಬ್ಯಾಡ್ರಿ, ನಾವ ನದಿ ತಿರಗಸ್ತೇವಿ' ಅನ್ನೋದನ್ನ ಓದಿ ನನ್ನ ತಲಿ ಅಂತೂ ತಿರಗಿತ್ತ. ಇನ್ನ ಮುಂದೆ ಇಲ್ಲೆ ಪಿಂಡ ಬಿಟ್ಟರೆ ಸತ್ತೋರ ಆತ್ಮ ತಿರಗತ್ತೆ ಅಂತ ಬೋರ್ಡ್ ಹಾಕರಿ ಅಂದರೆ ಜನಾ ಪಿಂಡಾ ಬಿಡೋದ ಬಂದ ಮಾಡ್ತಾರ ಅಂತ ನಾ ಪುಕ್ಕಟ ಸಜೆಶನ್ ಕೊಟ್ಟ ಬಂದೆ.

☆

ಐದು ಮಕ್ಕಳನ್ನು
ಹೆರಲು ಕರೆ
– ಸುದ್ದಿ

